ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ


20ನೇ ವಾರ್ಷಿಕ ಆಡಳಿತ ವರದಿ 2019-20







ಗೌರವಾನ್ವಿತ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರಿಂದ
ಪಿ.ಸಿ.ಆರ್.ಎ ಪ್ರಶಸ್ತಿ ಪಡೆದುದಕ್ಕೆ ಪ್ರಶಂಸನಾ ಪ್ರಮಾಣ ಪತ್ರ ವಿತರಣೆ



ಸಂಸ್ಥೆಯ 3 ಘಟಕಗಳಿಗೆ ಇಂಧನ ಉಳಿತಾಯಕ್ಕಾಗಿ ಲಭಿಸಿದ ಪಿ.ಸಿ.ಆರ್.ಎ ಪ್ರಶಸ್ತಿ ಸಮಾರಂಭ
(ಆನ್ ಲೈನ್ ಮೂಲಕ)

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಸಾರಿಗೆ ಸದನ, ಕೇಂದ್ರ ಕಛೇರಿ, ಮುಖ್ಯ ರಸ್ತೆ, ಕಲಬುರಗಿ–585 102

20ನೇ

ವಾರ್ಷಿಕ ಆಡಳಿತ ವರದಿ

2019-20

ಪ್ರಕಾಶಕರು : ವ್ಯವಸ್ಥಾಪಕ ನಿರ್ದೇಶಕರು,
ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,
ಕೇಂದ್ರ ಕಛೇರಿ, ಸಾರಿಗೆ ಸದನ,
ಕಲಬುರಗಿ –585 102

ಸಂಕಲನಕಾರರು : ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ,
ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,
ಕೇಂದ್ರ ಕಛೇರಿ, ಸಾರಿಗೆ ಸದನ,
ಕಲಬುರಗಿ –585 102

ಮುದ್ರಕರು : ಮುದ್ರಣ ಮತ್ತು ಲೇಖನ ಸಾಮಗ್ರಿ ನಿಯಂತ್ರಕರು,
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮುದ್ರಣಾಲಯ,
ಕೆ. ಹೆಚ್. ರಸ್ತೆ, ಶಾಂತಿನಗರ,
ಬೆಂಗಳೂರು – 560 027.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಸಾರಿಗೆ ಸದನ : ಕೇಂದ್ರ ಕಛೇರಿ : ಮುಖ್ಯರಸ್ತೆ : ಕಲಬುರಗಿ – 585 102.

ಸಂಖ್ಯೆ: ಈಕರಸಾ/ಕೇಕ/ಆಮಾವ್ಯ/ /2020 ದಿನಾಂಕ:

ಇವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ,
ಬಹುಮಹಡಿ ಕಟ್ಟಡ,
ಬೆಂಗಳೂರು–560 001.

ಮಾನ್ಯರೆ,

ವಿಷಯ: ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 20ನೇ ವಾರ್ಷಿಕ ಆಡಳಿತ ವರದಿ ಕುರಿತು.

******

1950ರ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮ 35(2)ನೇ ಕಲಂನಲ್ಲಿ ಗೊತ್ತುಪಡಿಸಿರುವಂತೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2019–20ನೇ ಸಾಲಿನ ಇಪ್ಪತ್ತನೇಯ ವಾರ್ಷಿಕ ವರದಿಯನ್ನು ಸಂಬಂಧಪಟ್ಟ ಅಂಕಿಅಂಶ ಕೋಷ್ಟಕಗಳು ಮತ್ತು ಹಣಕಾಸು ತಖ್ತೆಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/–
(ಕೂರ್ಮಾರಾವ್. ಎಂ.)
ವ್ಯವಸ್ಥಾಪಕ ನಿರ್ದೇಶಕರು.

ಪ್ರಗತಿ ಪಕ್ಷಿನೋಟ
ಮುಖ್ಯಾಂಶಗಳು

ಕ್ರ. ಸಂ.	ವಿವರಗಳು	2000-01	2005-06	2010-11	2015-16	2016-17	2017-18	2018-19	2019-20
I	**ಸಂಸ್ಥೆ (ಮಾರ್ಚ್ 31ರಂದು ಇದ್ದಂತೆ)**								
	1 ಕೇಂದ್ರ ಕಛೇರಿ	1	1	1	1	1	1	1	1
	2 ವಿಭಾಗಗಳು	6	6	8	9	9	9	9	9
	3 ಘಟಕಗಳು	26	29	43	48	50	50	52	52
	4 ಉದ್ಯೋಗಿಗಳು	10005	10880	17586	20341	20577	20218	20574	20376
	5 ಅನುಸೂಚಿಯೊಂದಕ್ಕೆ ಸಿಬ್ಬಂದಿ ಪ್ರಮಾಣ	5.46	4.86	4.85	4.95	4.94	4.74	4.80	4.79
II	**ಕಾರ್ಯಾಚರಣೆ (ಮಾರ್ಚ್ 31ರಂದು ಇದ್ದಂತೆ)**								
	1 ವಾಹನಗಳು	2027	*2586	3971	4495	4549	4759	4878	4729
	2 ಅನುಸೂಚಿಗಳು	1831	2424	3629	4106	4167	4267	4285	4252
	3 ಸೇರ್ಪಡೆಯಾದ ಹೊಸ ವಾಹನಗಳು	265	481	451	367	384	996	544	49
	4 ನಿಷ್ಕ್ರಿಯಗೊಳಿಸಿದ ಹಳೆ ವಾಹನಗಳು	26	243	344	239	330	779	424	248
	5 ದೈನಂದಿನ ಅನುಸೂಚಿ ಕಿ.ಮೀ.ಗಳು(ಲಕ್ಷ)	6.41	8.34	13.21	14.29	14.67	15.30	15.33	15.25
	6 ಮಾರ್ಗಗಳು	2729	3033	3529	3820	3948	4159	3990	3790
	7 ಮಾರ್ಗ ಕಿ.ಮೀ.ಗಳು (ಲಕ್ಷ)	3.08	2.45	3.44	3.69	3.93	3.98	4.17	3.66
	8 ಅಂತರರಾಜ್ಯ ಮಾರ್ಗಗಳು	174	235	442	430	457	454	469	457
	9 ವೇಗದೂತ ಸಾರಿಗೆ ಸೇವೆಗಳು	803	1134	1839	1768	1867	1849	1959	1918
	10 ನಗರ ಸಾರಿಗೆ ಸೇವೆಗಳು	-	-	-	479	421	393	343	266
	11 ಅರೆಸುಖಾಸೀನ ಸೇವೆಗಳು	14	-	-	-	-	-	-	-
	12 ಸುಖಾಸೀನ ಸೇವೆಗಳು	42	59	78	64	61	62	56	58
	13 ಹವಾನಿಯಂತ್ರಿತ/ಹವಾನಿಯಂತ್ರಿತರಹಿತ ಸ್ಲೀಪರ್ ಸೇವೆಗಳ	0	0	40	80	84	118	114	122
III	**ಪ್ರಯಾಣಿಕ ಸೌಲಭ್ಯಗಳು (ಮಾರ್ಚ್ 31ರಂದು ಇದ್ದಂತೆ)**								
	1 ವಾಹನ ನಿಲ್ದಾಣಗಳು								
	ಅ.ಖಾಯಂ	74	84	113	136	146	151	152	154
	ಆ.ತಾತ್ಕಾಲಿಕ	6	11	7	10	11	10	10	-
	2 ಗ್ರಾಮಾಂತರ ರಸ್ತೆಯಂಚಿನ ಆಶ್ರಯದಾಣಗಳು	82	772	993	1161	1161	913	917	943
	3 ನಗರಸಾರಿಗೆ ಆಶ್ರಯದಾಣಗಳು	26	26	96	178	204	136	160	130
IV	**ಸಂಚಾರ ಕಾರ್ಯಚಟುವಟಿಕೆಗಳು**								
	1 ಒಟ್ಟು ಅನುಸೂಚಿ ಕಿ.ಮೀ.ಗಳು (ಲಕ್ಷ)	1123.46	2849.29	4439.94	4988.04	5051.35	5208.82	5365.90	5263.06
	2 ಒಟ್ಟು ಪರಿಣಾಮಕಾರಿ ಕಿ.ಮೀ.ಗಳು (ಲಕ್ಷ)	1054.67	2695.31	4294.94	4809.32	4853.05	5046.31	5160.90	5064.17
	3 ದೈನಂದಿನ ಪರಿಣಾಮಕಾರಿ ಕಿ.ಮೀ.ಗಳು (ಲಕ್ಷ)	5.79	7.38	11.77	13.14	13.30	13.83	14.14	13.84
	4 ದೈನಂದಿನ ಪ್ರಯಾಣಿಕರ ಸಂಖ್ಯೆ (ಲಕ್ಷ)	7.88	9.32	12.78	13.45	13.50	13.52	13.55	13.58
	5 ದೈನಂದಿನ ಸಾರಿಗೆ ಆದಾಯ (ಲಕ್ಷ ರೂ.ಗಳು)	60.88	100.64	210.40	361.78	362.93	387.81	417.83	420.63
	6 ಪ್ರತಿ ಕಿ.ಮೀ. ಆದಾಯ (ಪೈಸೆ)	1050.6	1362.9	1788.1	2753.2	2729.6	2805.0	2955.0	3040.0
	7 ಲೋಡ್ ಫ್ಯಾಕ್ಟರ್ (ಶೇ.)	65.0	60.8	60.4	62.2	64.1	65.8	68.9	70.6
V	**ನಿರ್ವಹಣೆ**								
	1 ವಾಹನ ಸಮೂಹ ಬಳಕೆ (ಶೇ.)	92.6	95.5	91.2	89.6	90.5	90.5	86.3	85.4
	2 ಸರಾಸರಿ ವಾಹನ ಬಳಕೆ (ಕಿ.ಮೀ.ಗಳು)								
	ಅ) ಪರಿಣಾಮಕಾರಿ ಕಿ.ಮೀ.ಗಳ ಮೇಲೆ	320	317	342	330	335	340	342	343
	ಆ) ಒಟ್ಟು ಕಿ.ಮೀ.ಗಳ ಮೇಲೆ	327	323	352	342	346	350	352	350
	3 ಕೆ.ಎಂ.ಪಿ.ಎಲ್ (ಇಂಧನ)	4.87	5.44	5.25	5.15	5.17	5.20	5.25	5.24
	4 ಟಯರ್ ಜೀವಮಾನ (ಸರಾಸರಿ ಕಿ.ಮೀ.ಗಳು)								
	ಅ) ಹೊಸ ಟಯರ್	34067	37340	47041	67798	72270	78121	88489	91291
	ಆ) ಮರುಒಪ್ಪಗೊಳಿಸಿದ ಟಯರ್	26241	22253	19740	27164	30308	32581	37254	43314
	ಇ) ಒಟ್ಟು ಜೀವಮಾನ	103989	118983	107088	127278	139449	143637	154998	161305

ಕ್ರ. ಸಂ.	ವಿವರಗಳು	2000-01	2005-06	2010-11	2015-16	2016-17	2017-18	2018-19	2019-20
VI	**ಸಾರಿಗೆ ಸೇವೆಗಳ ಗುಣಮಟ್ಟ**								
	1 ಅಪಘಡ ಪ್ರಮಾಣ (ಪ್ರತಿ 10000 ಕಿ.ಮೀ.ಗಳಿಗೆ)	0.23	0.22	0.11	0.09	0.09	0.08	0.04	0.06
	2 ಅಪಘಾತ ಪ್ರಮಾಣ (ಪ್ರತಿ ಒಂದು ಲಕ್ಷ ಕಿ.ಮೀ.ಗಳಿಗೆ)	0.12	0.15	0.12	0.08	0.08	0.07	0.06	0.06
	3 ಸಮಯ ಪಾಲನೆ (ಶೇ.)								
	ಅ) ನಿರ್ಗಮನ	86.8	90.3	89.1	92.8	92.4	92.7	92.7	91.0
	ಆ) ಆಗಮನ	89.5	92.3	91.7	93.5	92.9	94.1	94.2	94.0
	4 ಸಾರ್ವಜನಿಕ ದೂರುಗಳು (ಒಂದು ಲಕ್ಷ ಪ್ರಯಾಣಿಕರಿಗೆ)	0.02	0.10	0.07	0.06	0.06	0.07	0.09	0.07
VII	**ಬಂಡವಾಳ (ಲಕ್ಷ ರೂ.ಗಳಲ್ಲಿ) (ಮಾರ್ಚ್ 31ರಂದು ಇದ್ದಂತೆ)**								
	1 ಹೂಡಿಕೆ								
	ಅ) ರಾಜ್ಯ ಸರ್ಕಾರ								
	1) ಬಂಡವಾಳ ವಂತಿಗೆ	29.86	2029.86	13033.48	3197.48	3197.48	3197.48	3197.48	3197.48
	2) ಇಕ್ವಿಟಿ ಬಂಡವಾಳ	8320.19	8320.19	9914.91	9914.91	9914.91	9914.91	9914.91	9914.91
	ಆ) ಕೇಂದ್ರ ಸರ್ಕಾರ								
	1) ಬಂಡವಾಳ ವಂತಿಗೆ	0.00	0.00	0.00	0.00	0.00	0.00	0.00	0.00
	2) ಇಕ್ವಿಟಿ ಬಂಡವಾಳ	0.00	0.00	0.00	0.00	0.00	0.00	0.00	0.00
	2 ಆಂತರಿಕ ಸಂಪನ್ಮೂಲಗಳು	2784.13	6706.91	28742.63	60670.41	64283.19	64303.19	72303.19	72303.19
	3 ಡಿಬೆಂಚರ್ ಸಾಲಗಳು	0.00	0.00	0.00	0.00	0.00	0.00	0.00	0.00
	4 ಇತರ (ಬ್ಯಾಂಕ್ ಸಾಲ ಮತ್ತು ಅನುದಾನಗಳು)	6624.68	6685.43	17983.73	6608.94	4467.25	7101.85	13559.80	13546.88
	ಒಟ್ಟು	**17758.86**	**23742.39**	**69674.75**	**80391.74**	**81862.83**	**84517.43**	**98975.38**	**98962.46**
VIII	**ಸ್ಥಿರ ಸ್ವತ್ತುಗಳು (ಲಕ್ಷ ರೂ.ಗಳಲ್ಲಿ)(ಮಾರ್ಚ್ 31ರಂದು ಇದ್ದಂತೆ)**								
	1 ಭೂಮಿ ಮತ್ತು ಕಟ್ಟಡಗಳು	2521.03	4875.07	17869.18	34979.71	38147.57	43181.77	49412.26	55776.16
	2 ಪ್ರಯಾಣಿಕ ವಾಹನಗಳು	14845.89	17499.67	48649.26	69969.98	73323.41	88756.10	94227.22	92988.54
	3 ಇಲಾಖಾ ವಾಹನಗಳು	166.94	426.91	760.22	1010.99	994.01	1151.61	1116.68	1160.33
	4 ಸ್ಥಾವರ, ಯಂತ್ರೋಪಕರಣ ಮತ್ತು ಇತರ ಉಪಕರಣಗಳು	562.57	1027.69	2383.16	3887.78	4041.44	4083.81	4886.29	5176.02
	ಒಟ್ಟು	**18096.43**	**23829.34**	**69661.82**	**109848.46**	**116506.43**	**137173.29**	**149642.45**	**155101.05**
IX	**ಕಾರ್ಯಾಚರಣೆ ಫಲಿತಾಂಶಗಳು (ಲಕ್ಷ ರೂ.ಗಳು)**								
	1 ಸಾರಿಗೆ ಆದಾಯ	11237.76	36735.18	76795.82	132410.82	132470.59	141549.60	152506.57	153950.86
	2 ಇತರ ಆದಾಯ	425.00	2735.41	9642.33	17714.28	19471.68	21994.76	26563.06	29768.25
	3 ಒಟ್ಟು ಆದಾಯ	11662.76	39470.59	86438.15	150125.10	151942.27	163544.36	179069.63	183719.11
	4 ಒಟ್ಟು ಕಾರ್ಯಾಚರಣೆ ವೆಚ್ಚ (ಸವಕಳಿ, ಬಡ್ಡಿ ಮತ್ತು ಬೋನಸ್ ಸೇರಿ)	13781.18	42249.47	87643.34	152316.61	157388.25	166874.96	185892.99	192646.49
	5 ನಿವ್ವಳ ನಷ್ಟ (ಸವಕಳಿ, ಬಡ್ಡಿ ಮತ್ತು ಬೋನಸ್ ಸೇರಿ)	-2118.42	-2778.88	-1205.19	-2191.51	-5445.98	-3330.60	-6823.36	-8927.38
	6 ಬಂಡವಾಳ ಮೇಲಿನ ಪ್ರತಿಫಲ(ನಿವ್ವಳ ಲಾಭ+ಬಡ್ಡಿ)	-1610.22	-2494.68	114.80	-1172.91	-691.20	-485.24	-5940.46	-7956.50
	7 ಮಧ್ಯಸ್ಥ ಬಂಡವಾಳ ಮೇಲಿನ ಪ್ರತಿಫಲ(ಶೇ.)	-29.84	-73.64	2.87	-8.61	-39.30	-15.06	-12.24	-4.82
	8 ಸಂಚಿತ ನಷ್ಟ (ಕೋಟಿ ರೂ.ಗಳು)	-105.01	-218.86	-405.11	-520.87	-575.33	-608.64	-676.87	-766.14
	9 ನಿವ್ವಳ ಮೌಲ್ಯ (ವರ್ತ್)(ಕೋಟಿ ರೂ.ಗಳು)	-13.15	-91.63	-130.61	79.33	105.65	166.24	83.39	-8.20

ವಿಷಯ ಸೂಚಿ

ಕ್ರ.ಸಂ.	ವಿಷಯ	ಪುಟ ಸಂಖ್ಯೆ
1	ಪೀಠಿಕೆ	1
2	ಆಡಳಿತ ಮಂಡಳಿ	4
3	ಆಡಳಿತ	7
4	ಕಾರ್ಯಾಚರಣೆ	12
5	ಆಟೋ ಇಂಜಿನಿಯರಿಂಗ್	23
6	ಉಗ್ರಾಣ	29
7	ಆರ್ಥಿಕ ವ್ಯವಹಾರ	31
8	ಕಾಮಗಾರಿ	39
9	ಕಾರ್ಮಿಕ ಕಲ್ಯಾಣ	40
10	ಭದ್ರತಾ ಮತ್ತು ಜಾಗೃತಾ ವ್ಯವಸ್ಥೆ	44
11	ಮಾಹಿತಿ ತಂತ್ರಜ್ಞಾನ	47
11	ಇತರ ವಿಷಯಗಳು	49
	ಅನುಸೂಚಿಗಳು	
ಅ	ನಿರ್ದೇಶಕರು ಭಾಗವಹಿಸಿದ ಮಂಡಳಿ ಸಭೆಗಳ ಸಂಖ್ಯೆ	55
ಆ	ವರ್ಗವಾರು ವೇತನ ಶ್ರೇಣಿಗಳು	57
ಇ	ಪ್ರಯಾಣ ದರ ರಚನೆ	60
ಈ	ಸಾಂದರ್ಭಿಕ ಕರಾರಿನ ಮೇಲೆ ಬಸ್ ಬಾಡಿಗೆ ದರಗಳು	62
ಉ	ಸವಕಳಿ	63
	ಅನುಬಂಧಗಳು	
1	ಸಿಬ್ಬಂದಿ ಮತ್ತು ಅನುಸೂಚಿಗಳು	67
2	ಘಟಕಗಳು, ಮಾರ್ಗಗಳು ಮತ್ತು ಮಾರ್ಗ ದೂರ	68
3	ಕಾರ್ಯಾಚರಣೆ ಕಿ.ಮೀ.ಗಳು	69
4	ಸರಾಸರಿ ವಾಹನ ಬಳಕೆ	70
5	ಸಾರಿಗೆ ಸೇವೆಯ ಗುಣಮಟ್ಟ	71
6	ವಾಹನ ಸಮೂಹ ರಚನೆ ಮತ್ತು ಅದರ ಬಳಕೆ	72
7	ನಿರ್ವಹಣೆ – ಇಂಧನ ಮತ್ತು ಟಯರ್	73
8	ಲೆಕ್ಕಪತ್ರ ಕಾರ್ಯನೀತಿ ಮತ್ತು ಅಡ್ಡಾವೆ ಪತ್ರಕ್ಕೆ ಟಿಪ್ಪಣಿ	74
9	ಲಾಭ ಮತ್ತು ನಷ್ಟದ ಪಟ್ಟಿ	81
10	ಆಸ್ತಿ ಮತ್ತು ಜವಾಬ್ದಾರಿ ಪಟ್ಟಿ	85
11	ಸವಕಳಿ ಲೆಕ್ಕಾಚಾರ	88
12	ಬಂಡವಾಳ ವೆಚ್ಚದ ವಿವರಗಳು	89
	ರೇಖಾ ಚಿತ್ರಗಳು	

ಪರಿಚ್ಛೇದ 1

ಪೀಠಿಕೆ

1.1 ವರದಿಯ ಅವಧಿ:

ಇದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 20ನೇ ವಾರ್ಷಿಕ ಆಡಳಿತ ವರದಿಯಾಗಿದ್ದು, 2019–20ನೇ ಆರ್ಥಿಕ ವರ್ಷಕ್ಕೆ (ಏಪ್ರಿಲ್ 2019ರಿಂದ ಮಾರ್ಚ್ 2020ರವರೆಗೆ) ಸಂಬಂಧಿಸಿದಂತೆ ಸಂಸ್ಥೆಯ ಕಾರ್ಯಚಟುವಟಿಕೆಗಳ ವಿವರಗಳನ್ನೊಳಗೊಂಡಿರುತ್ತದೆ.

1.2 ಆಡಳಿತ ವರ್ಗ:

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆಡಳಿತವನ್ನು ನಿರ್ದೇಶಕರ ಮಂಡಳಿಯ ಮೂಲಕ ನಡೆಸಲು ತಿದ್ದುಪಡಿಗೊಂಡ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮ 1982ರಲ್ಲಿ ಅವಕಾಶವಿದೆ. ಸಂಸ್ಥೆಯ ನಿರ್ದೇಶಕರ ಮಂಡಳಿಯಲ್ಲಿ ಅಧಿಕಾರಿ ನಿರ್ದೇಶಕರು ಮತ್ತು ಅಧಿಕಾರೇತರ ನಿರ್ದೇಶಕರು ಇರುತ್ತಾರೆ. ಎಲ್ಲಾ ನಿರ್ದೇಶಕರನ್ನು ರಾಜ್ಯ ಸರ್ಕಾರ ನೇಮಿಸುತ್ತದೆ.

1.3 ಆಡಳಿತ ವ್ಯವಸ್ಥೆ:

ಈ.ಕ.ರ.ಸಾ.ಸಂಸ್ಥೆಯ ಕೇಂದ್ರ ಕಛೇರಿ ಕಲಬುರಗಿಯಲ್ಲಿದ್ದು, ಇದರ ವ್ಯಾಪ್ತಿಯಲ್ಲಿ 9 ವಿಭಾಗೀಯ ಕಛೇರಿಗಳು [ಕಲಬುರಗಿ–1, ಕಲಬುರಗಿ–2, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯಪುರ (ದಿನಾಂಕ 29.11.2009ರಿಂದ) ಮತ್ತು ಹೊಸಪೇಟೆ], ವರದಿ ವರ್ಷದಲ್ಲಿ ದಿನಾಂಕ 01.03.2020ರಿಂದ ರಾಯಚೂರು ವಿಭಾಗದಲ್ಲಿ ರಾಯಚೂರು ಘಟಕ–1ಅನ್ನು ರಾಯಚೂರು ಘಟಕ 2 ಮತ್ತು 3ರಲ್ಲಿ ವಿಲೀನಗೊಳಿಸಲಾಗಿರುತ್ತದೆ. ಅಲ್ಲದೆ ದಿನಾಂಕ 01.11.2019ರಿಂದ ಜಾರಿಗೆ ಬರುವಂತೆ ಕ.ರಾ.ರ.ಸಾ.ಸಂಸ್ಥೆಯ ದಾವಣಗೇರೆ ವಿಭಾಗದ ಹರಪನಹಳ್ಳಿ ಘಟಕವನ್ನು ಈ.ಕ.ರ.ಸಾ.ಸಂಸ್ಥೆಯ ಹೊಸಪೇಟೆ ವಿಭಾಗಕ್ಕೆ ವರ್ಗಾಯಿಸಲಾಗಿರುತ್ತದೆ. ಒಟ್ಟು 52 ಘಟಕಗಳು ಕಾರ್ಯಾಚರಣೆಯಲ್ಲಿದ್ದವು. ಯಾದಗಿರಿಯಲ್ಲಿ ಒಂದು ಪ್ರಾದೇಶಿಕ ಕಾರ್ಯಾಗಾರ, ಕಲಬುರಗಿಯಲ್ಲಿ ಹಾಗೂ ಬಳ್ಳಾರಿಯಲ್ಲಿ ತಲಾ ಒಂದು ಕಾಮಗಾರಿ ವಿಭಾಗ ಮತ್ತು ಹುಮ್ನಾಬಾದ್‌ನಲ್ಲಿ ಪ್ರಾದೇಶಿಕ ತರಬೇತಿ ಕೇಂದ್ರ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ಚಾಲಕರ ತರಬೇತಿ ಕೇಂದ್ರಗಳಿದ್ದು, ಇವುಗಳು ಕಾರ್ಯ ನಿರ್ವಹಿಸುತ್ತಿದ್ದವು.

1.4 ಪ್ರಯಾಣಿಕರಿಗೆ ಸೌಕರ್ಯಗಳು ಮತ್ತು ಅನುಕೂಲತೆಗಳು:

ಸಂಸ್ಥೆಯು ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಿದೆ. ದಿನಾಂಕ 31–03–2020ರಂದು ಸಂಸ್ಥೆಯಲ್ಲಿ ಒಟ್ಟು 154 ಖಾಯಂ ಬಸ್ ನಿಲ್ದಾಣಗಳು, 943 ಗ್ರಾಮೀಣ ರಸ್ತೆಯಂಚಿನ ಆಶ್ರಯದಾಣಗಳು ಮತ್ತು 130 ನಗರಸಾರಿಗೆ ಆಶ್ರಯದಾಣಗಳು ಇದ್ದವು. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ವರದಿ ವರ್ಷದಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 49 ಹೊಸ ವಾಹನಗಳನ್ನು ಸೇರ್ಪಡೆ ಮಾಡಲಾಗಿದೆ ಹಾಗೂ 248 ಹಳೆಯ ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದೆ.

ದಿನಾಂಕ 31–03–2020ಕ್ಕೆ ಸಂಸ್ಥೆಯು 4252 ಅನುಸೂಚಿಗಳನ್ನು 3790 ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಿದೆ. ಸಂಸ್ಥೆಯ ವಾಹನ ಬಲ 4729 ಆಗಿದ್ದು, ಸರಾಸರಿ 13.84 ಲಕ್ಷ ದೈನಂದಿನ ಕಿ.ಮೀ.ಗಳನ್ನು ಕಾರ್ಯಾಚರಣೆಗೊಳಿಸಿದೆ.

ಸಂಸ್ಥೆಯಲ್ಲಿ 266 ನಗರ ಹಾಗೂ ಉಪನಗರ, 1888 ಸಾಮಾನ್ಯ, 1918 ವೇಗದೂತ, 58 ಹೈ–ಟೆಕ್/ ರಾಜಹಂಸ/ಸುಹಾಸ, 18 ಹವಾನಿಯಂತ್ರಿತ ಸ್ಲೀಪರ್, 104 ಹವಾನಿಯಂತ್ರಿತರಹಿತ ಸ್ಲೀಪರ್ ಸಾರಿಗೆ ಸೇವೆಗಳು ವರ್ಷಾಂತ್ಯಕ್ಕೆ ಕಾರ್ಯಾಚರಣೆಯಲ್ಲಿದ್ದವು.

1.5 ಕಾರ್ಯಾಚರಣಾ ದಕ್ಷತೆ:

ಕಾರ್ಯಾಚರಣೆಯ ಕಾರ್ಯಕ್ಷಮತೆಯನ್ನು ಉತ್ತಮಪಡಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾರ್ಗತನಿಖಾ ವ್ಯವಸ್ಥೆಯನ್ನು ಬಲಪಡಿಸುವುದರೊಂದಿಗೆ, ಆದಾಯವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

2019–20ನೇ ಸಾಲಿನ ಕಾರ್ಯನಿರ್ವಹಣಾ ಫಲಿತಾಂಶಗಳನ್ನು ಹಿಂದಿನ ಸಾಲಿನದೊಂದಿಗೆ ಹೋಲಿಸಿದಾಗ, ಈ ಕೆಳಕಂಡ ಅಂಶಗಳು ಕಂಡು ಬಂದಿವೆ.

1. ಪರಿಣಾಮಕಾರಿ ಕಿ.ಮೀ.ಗಳು 5160.90 ಲಕ್ಷದಿಂದ 5064.17 ಲಕ್ಷಕ್ಕೆ ಇಳಿಕೆಯಾಗಿದ್ದು, ಶೇ.1.9ರಷ್ಟು ಕಡಿಮೆ ವೃದ್ಧಿಯಾಗಿದೆ.
2. ಅವಘಡ ಪ್ರಮಾಣ (ಪ್ರತಿ 10000 ಕಿ. ಮೀ.ಗಳಿಗೆ) ಕಳೆದ ವರ್ಷದ 0.04ರಿಂದ 0.06ಕ್ಕೆ ಏರಿಕೆಯಾಗಿದೆ.
3. ಅಪಘಾತ ಪ್ರಮಾಣ (ಪ್ರತಿ ಲಕ್ಷ ಕಿ. ಮೀ.ಗಳಿಗೆ) ಕಳೆದ ವರ್ಷಕ್ಕೆ ಹೋಲಿಸಿದಲ್ಲಿ 0.06ಕ್ಕೆ ಸ್ಥಿರವಾಗಿದೆ.
4. ಒಟ್ಟು ಆದಾಯ ರೂ. 179069.63 ಲಕ್ಷದಿಂದ ರೂ. 183719.11 ಲಕ್ಷಕ್ಕೆ ಹೆಚ್ಚಳಗೊಂಡಿದ್ದು, ಶೇ.2.6ರಷ್ಟು ಬೆಳವಣಿಗೆಯಾಗಿದೆ.
5. ಸಂಸ್ಥೆಯ ಒಟ್ಟು ಆದಾಯದ ಮೇಲಿನ ನಷ್ಟವನ್ನು ಕಳೆದ ವರ್ಷಕ್ಕೆ ಹೋಲಿಸಿದಲ್ಲಿ, ಕಳೆದ ವರ್ಷದ ರೂ. 68.23 ಕೋಟಿಯಿಂದ ರೂ. 89.27 ಕೋಟಿಗೆ ಏರಿಕೆಯಾಗಿದೆ.

1.6 ಸಂಸ್ಥೆಯ ಕಾರ್ಯಾಚರಣೆಯ ಮೇಲೆ ಕೋವಿಡ್–19ರ ಪರಿಣಾಮ :–

ಮಹಾಮಾರಿ ಕೋವಿಡ್–19ರ ಸಾಂಕ್ರಾಮಿಕ ರೋಗವು ರಾಷ್ಟ್ರಾದ್ಯಂತ ಹರಡಿದ್ದು, ಕಲ್ಯಾಣ ಕರ್ನಾಟಕದ ಈ ಭಾಗದಲ್ಲಿ ಕೋವಿಡ್–19ರ ರೋಗ ಹರಡುವಿಕೆಯು ಮಾರ್ಚ್–20ರ ಮಾಹೆಯಿಂದಲೇ ಪ್ರಾರಂಭವಾಗಿದ್ದು, ಕೋವಿಡ್–19ರ ರೋಗದಿಂದಾಗಿ ದಿನಾಂಕ 10.3.2020ರಂದು ದೇಶದಲ್ಲಿಯೇ ಮೊಟ್ಟ ಮೊದಲನೇ ಸಾವು ಕಲಬುರಗಿಯಲ್ಲಿ ಸಂಭವಿಸಿರುತ್ತದೆ. ಸರಕಾರವು ಈ ನಿಟ್ಟಿನಲ್ಲಿ ಕೋವಿಡ್–19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ಕ್ರಮವಾಗಿ ರಾಜ್ಯಾದ್ಯಂತ 14.03.2020ರಿಂದ ಒಂದು ವಾರದವರೆಗೆ ಮುಂಜಾಗ್ರತ ಕ್ರಮಗಳು ಹಾಗೂ ಕಟ್ಟೆಚ್ಚರ ಘೋಷಣೆ ಮಾಡಿತು. ಅಲ್ಲದೇ ದಿನಾಂಕ 22.03.2020ರಂದು ಒಂದು ದಿನದ ಜನತಾ ಕರ್ಫ್ಯೂನ್ನೂ ವಿಧಿಸಲಾಯಿತು. ನಂತರ ದಿನಾಂಕ 24.03.2020ರಿಂದ ಸಂಪೂರ್ಣವಾಗಿ ಲಾಕಡೌನ್ ಘೋಷಣೆಯಾಗಿರುತ್ತದೆ. ಕಲ್ಯಾಣ ಕರ್ನಾಟಕದ ವ್ಯಾಪ್ತಿಯಲ್ಲಿ ಕೋವಿಡ್–19ರ ಪರಿಣಾಮ ಉಂಟಾಗಿ ಸಂಸ್ಥೆಯ ಅನುಸೂಚಿಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿರುವುದರಿಂದ ಮಾರ್ಚ್–20ರ ಮಾಹೆಯಲ್ಲಿ ಒಟ್ಟು 175.77 ಲಕ್ಷ ಕಿ.ಮೀ ರದ್ದತಿಯಾಗಿ ರೂ. 65.03 ಕೋಟಿಯಷ್ಟು ಸಾರಿಗೆ ಆದಾಯ ಗಳಿಕೆಯಲ್ಲಿ ಕೊರತೆಯಾಗಿರುತ್ತದೆ. ತತ್ಪರಿಣಾಮವಾಗಿ ಸಂಸ್ಥೆಯ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆಯ ಪ್ರಗತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಸದರಿ ಸಾಲಿನಲ್ಲಿ ಸ್ವಲ್ಪರ ಮಟ್ಟಿಗೆ ಪ್ರಗತಿ ಕುಂಠಿತವಾಗಲು ಕಾರಣವಾಗಿರುತ್ತದೆ.

1.7 ಔದ್ಯಮಿಕ ಸಂಬಂಧ:

ಸಂಸ್ಥೆಯು ಕಾರ್ಮಿಕರೊಂದಿಗೆ ಸೌಹಾರ್ದಯುತ ಬಾಂಧವ್ಯವನ್ನು ಹೊಂದಿದೆ. ಅದು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಕಾರ್ಮಿಕರಿಗೆ ಒದಗಿಸಿದ್ದ ಸವಲತ್ತುಗಳನ್ನು ಮುಂದುವರೆಸುವುದರೊಂದಿಗೆ, ವೈದ್ಯಕೀಯ, ವಸತಿ ಹಾಗೂ ಇತರ ಕ್ಷೇಮಾಭ್ಯುದಯ ಸವಲತ್ತುಗಳನ್ನೂ ಸಹ ವಿಸ್ತರಿಸಿದೆ.

1.8 2020–21ನೇ ಸಾಲಿನ ಕಾರ್ಯ ಯೋಜನೆ:

2020–21ನೇ ಸಾಲಿನ ಕಾರ್ಯ ಯೋಜನೆಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

- 150 ಹೊಸ ಅನುಸೂಚಿಗಳ ಪ್ರಾರಂಭಕ್ಕಾಗಿ ಮತ್ತು ನಿಗದಿತ ಕಿ.ಮೀ. ಕ್ರಮಿಸಿದ 300 ಹಳೆಯ ವಾಹನಗಳ ಬದಲಾವಣೆಗಾಗಿ, ಒಟ್ಟು 450 ವಾಹನಗಳನ್ನು ಖರೀದಿಸುವುದು.
- 337 ಕಿ.ಮಿ.ಗಳ ಸರಾಸರಿ ವಾಹನ ಬಳಕೆಯನ್ನು ಸಾಧಿಸುವುದು.

- 52.48 ಕೋಟಿ ಪರಿಣಾಮಕಾರಿ ಕಿ.ಮೀ.ಗಳನ್ನು ಕಾರ್ಯಾಚರಿಸುವುದು ಮತ್ತು ರೂ. 1674.73ಕೋಟಿ ಸಾರಿಗೆ ಆದಾಯ ಗಳಿಸುವುದು.
- 5.33 ಕೆ.ಎಂ.ಪಿ.ಎಲ್ ಮತ್ತು 1,91,711 ಕಿ.ಮೀ. ಟಯರ್ ಜೀವಮಾನವನ್ನು ಸಾಧಿಸುವುದು.
- 3191.0 ಪೈಸೆ ಪ್ರತಿ ಕಿ.ಮೀ. ಸಾರಿಗೆ ಆದಾಯ ಸಾಧಿಸುವುದು ಮತ್ತು ಪ್ರತಿ ಕಿ.ಮೀ. ವೆಚ್ಚವನ್ನು 3943.8 ಪೈಸೆಗೆ ಸೀಮಿತಗೊಳಿಸುವುದು.

ಸಮಗ್ರ ಕಾರ್ಯ ಯೋಜನೆಯನ್ನು ರೂಪಿಸಿದ್ದು, ಭೌತಿಕ ಮತ್ತು ಆರ್ಥಿಕ ನಿಯತಾಂಕಗಳ ಗುರಿಗಳನ್ನು ನಿಗದಿಪಡಿಸಲಾಗಿದೆ. ಅವುಗಳನ್ನು ಸಾಧಿಸಿ ಕಾರ್ಯನಿರ್ವಹಣಾ ದಕ್ಷತೆಯನ್ನು ಸುಧಾರಿಸಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಘಟಕ, ವಿಭಾಗೀಯ ಕಛೇರಿ ಮತ್ತು ಬಸ್ ನಿಲ್ದಾಣ ಇವುಗಳಲ್ಲಿ ಗಣಕೀಕರಣ ಚಟುವಟಿಕೆಗಳನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

*****

ಪರಿಚ್ಛೇದ 2

ಆಡಳಿತ ಮಂಡಳಿ

2.1 ನಿರ್ದೇಶಕರ ಮಂಡಳಿ ರಚನೆ:

ದಿನಾಂಕ 31–03–2020ರಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮಂಡಳಿಯು ಅಧ್ಯಕ್ಷರನ್ನು ಒಳಗೊಂಡಂತೆ ಒಟ್ಟು 08 ಮಂದಿ ನಿರ್ದೇಶಕರನ್ನು ಒಳಗೊಂಡಿತ್ತು. ಅಧ್ಯಕ್ಷರು ಅಧಿಕಾರಿ/ಅಧಿಕಾರೇತರ ನಿರ್ದೇಶಕರಾಗಿರಬಹುದು. ಅವರುಗಳ ಪೈಕಿ 7 ಮಂದಿ ಅಧಿಕಾರಿಯುತ ನಿರ್ದೇಶಕರಾಗಿದ್ದು, ಅಧಿಕಾರೇತರ ನಿರ್ದೇಶಕರು ಒಬ್ಬರಿದ್ದು, ಅವರು ಅಧ್ಯಕ್ಷರಾಗಿರುತ್ತಾರೆ. ಎಲ್ಲಾ ನಿರ್ದೇಶಕರನ್ನು ಕರ್ನಾಟಕ ರಾಜ್ಯ ಸರ್ಕಾರವು ನೇಮಿಸಿರುತ್ತದೆ.

2.2 ವರದಿ ವರ್ಷದಲ್ಲಿ ಮಂಡಳಿ ನಿರ್ದೇಶಕರುಗಳ ಬದಲಾವಣೆ:

2019–20ನೇ ಸಾಲಿನಲ್ಲಿ ಮಂಡಳಿಯ ನಿರ್ದೇಶಕರುಗಳಲ್ಲಿ ಆದ ಬದಲಾವಣೆ ಕೆಳಗಿನಂತಿರುತ್ತದೆ.

1. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ ಹಾಗೂ ಕ.ರಾ.ರ.ಸಾ.ನಿಗಮದ ನಿಯಮಾವಳಿಗಳು 1961ರನ್ವಯ ಶ್ರೀಮತಿ ಜಹೀರಾ ನಸೀಮ್, ಕ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು ಇವರನ್ನು ಈ.ಕ.ರ.ಸಾ.ಸಂಸ್ಥೆ, ಕಲಬುರಗಿ, ಮಂಡಳಿಗೆ ಅಧಿಕಾರಿಯುತ ಮಂಡಳಿ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಾರಿಇ 28 ಸಾಸಂಇ 2019 ದಿನಾಂಕ: 31.05.2019 ರಂತೆ ನೇಮಿಸಲಾಗಿರುತ್ತದೆ.

2. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಶಿವಯೋಗಿ ಸಿ. ಕಳಸದ, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ, ಇವರನ್ನು ಈ.ಕ.ರ.ಸಾ.ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧಿಕಾರಯುತ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 13 ಟಿಸಿಎಸ್ 2019 ದಿನಾಂಕ: 17.07.2019 ರಂತೆ ನೇಮಿಸಲಾಗಿದೆ.

3. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಶಿವಯೋಗಿ ಸಿ. ಕಳಸದ, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಇವರನ್ನು ಈ.ಕ.ರ.ಸಾ.ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧ್ಯಕ್ಷರನ್ನಾಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 14 ಟಿಸಿಎಸ್ 2019 ದಿನಾಂಕ: 29.07.2019 ರಂತೆ ನೇಮಿಸಲಾಗಿದೆ.

4. ಅಧ್ಯಕ್ಷರು ಹಾಗೂ ನಿರ್ದೇಶಕರುಗಳ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸುವ ಬಗ್ಗೆ ಕರ್ನಾಟಕ ಸರ್ಕಾರವು, ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಪತ್ರ ಸಂಖ್ಯೆ: ಸಾಉಇ 65 ಎಂಇಎ 2019 ದಿನಾಂಕ: 02.08.2019ರಂತೆ ಆದೇಶವನ್ನು ಹೊರಡಿಸಿರುತ್ತದೆ.

5. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು ಇವರನ್ನು ಈ.ಕ.ರ.ಸಾ.ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧ್ಯಕ್ಷರನ್ನಾಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 14 ಟಿಸಿಎಸ್ 2019 (ಭಾ) ದಿನಾಂಕ: 09.09.2019 ರಂತೆ ನೇಮಿಸಲಾಗಿದೆ.

6. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಗೌರವ್ ಗುಪ್ತ, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರನ್ನು ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧಿಕಾರಯುತ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 14 ಟಿಸಿಎಸ್ 2019 ದಿನಾಂಕ: 21.09.2019 ರಂತೆ ನೇಮಿಸಲಾಗಿದೆ.

7. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (2) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (3) ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಇವರುಗಳನ್ನು ಈ.ಕ.ರ.ಸಾ.ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧಿಕಾರಯುತ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 13 ಟಿಸಿಎಸ್ 2019 ದಿನಾಂಕ: 16.12.2019 ರಂತೆ ನೇಮಿಸಲಾಗಿದೆ.

ದಿನಾಂಕ 31.03.2020ರಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕರ ಮಂಡಳಿಯಲ್ಲಿದ್ದ ನಿರ್ದೇಶಕರುಗಳು

1) ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, : ಅಧಿಕಾರೇತರ ಅಧ್ಯಕ್ಷರು
ಸನ್ಮಾನ್ಯ ಉಪಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಸನ್ಮಾನ್ಯ ಅಧ್ಯಕ್ಷರು, ಈ.ಕ.ರ.ಸಾ.ಸಂಸ್ಥೆ,
ಕರ್ನಾಟಕ ಸರ್ಕಾರ,
ವಿಧಾನಸೌಧ, ಬೆಂಗಳೂರು–560 001.

2) ಶ್ರೀ ಗೌರವ್ ಗುಪ್ತ, ಭಾ.ಆ.ಸೇ., : ಅಧಿಕಾರಿಯುತ ನಿರ್ದೇಶಕರು
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಾರಿಗೆ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001.

3) ಶ್ರೀ ಶಿವಯೋಗಿ ಸಿ. ಕಳಸದ, ಭಾ.ಆ.ಸೇ., : ಅಧಿಕಾರಿಯುತ ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ,
ಬೆಂಗಳೂರು–560 027.

4) ಶ್ರೀಮತಿ ಸಿ. ಶಿಖಾ, ಭಾ.ಆ.ಸೇ., : ಅಧಿಕಾರಿಯುತ ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ಬೆಂ.ಮ.ಸಾ.ಸಂಸ್ಥೆ ಕೇಂದ್ರ ಕಛೇರಿ,
ಶಾಂತಿನಗರ, ಬೆಂಗಳೂರು–560 027.

5) ಶ್ರೀ ಪಿ. ರಾಜೇಂದ್ರ ಚೋಳನ್, ಭಾ.ಆ.ಸೇ., : ಅಧಿಕಾರಿಯುತ ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ,
ಗೋಕುಲ ರಸ್ತೆ, ಹುಬ್ಬಳ್ಳಿ 580030

6) ಶ್ರೀಮತಿ ಜಹೀರಾ ನಸೀಮ್, ಕ.ಆ.ಸೇ., (ಆ.ಶ್ರೇಣಿ) : ಅಧಿಕಾರಿಯುತ ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ಈ.ಕ.ರ.ಸಾ.ಸಂ. ಕೇಂದ್ರ ಕಛೇರಿ,
ಕಲಬುರಗಿ–585 102

7) ಶ್ರೀ ಪರೇಶ್ ಕುಮಾರ್ ಗೋಯೆಲ್, : ಅಧಿಕಾರಿಯುತ ನಿರ್ದೇಶಕರು
ನಿರ್ದೇಶಕರು(ಸಾರಿಗೆ),
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ,
ಸಾರಿಗೆ ಭವನ, ನಂ.1, ಸಂಸದ್ ಮಾರ್ಗ,
ನವದೆಹಲಿ–110 001.

8) ಶ್ರೀ ವಾಯ್ ಕೆ. ಪ್ರಕಾಶ, : ಅಧಿಕಾರಿಯುತ ನಿರ್ದೇಶಕರು
ಉಪ ಕಾರ್ಯದರ್ಶಿ (ಪಿಂಚಣಿ),
ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ,
ಬೆಂಗಳೂರು–560 001.

2.3 ಸಮಾವೇಶಗೊಂಡ ಸಭೆಗಳು:

2019–20ನೇ ಸಾಲಿನಲ್ಲಿ 2(ಎರಡು) ನಿರ್ದೇಶಕರ ಮಂಡಳಿ ಸಭೆಗಳನ್ನು ನಡೆಸಲಾಗಿದೆ. ಒಟ್ಟು 39 (ಮೂವತ್ತೊಂಭತ್ತು) ವಿಷಯಗಳನ್ನು ಮಂಡಿಸಿದ್ದು, 38 (ಮೂವತ್ತೆಂಟು) ಠರಾವುಗಳು ಅಂಗೀಕಾರವಾಗಿರುತ್ತವೆ. ಒಂದು ವಿಷಯವು ಪ್ರಸರಣ ಮುಖಾಂತರ ಅಂಗೀಕಾರವಾಗಿರುತ್ತದೆ.

ವರದಿ ವರ್ಷದಲ್ಲಿ ನಡೆಸಲಾದ ಸಭೆಗಳಿಗೆ ಭಾಗವಹಿಸಿದ ನಿರ್ದೇಶಕರ ಹಾಜರಾತಿ ಮಾಹಿತಿಯನ್ನು ಅನುಸೂಚಿ–'ಅ'ದಲ್ಲಿ ತೋರಿಸಲಾಗಿದೆ.

*****

ಪರಿಚ್ಛೇದ 3 **ಆಡಳಿತ**

3.1 ಕಾರ್ಯವ್ಯವಸ್ಥೆ:

ಸಂಸ್ಥೆಯು ವರದಿ ವರ್ಷದಲ್ಲಿ ತನ್ನ ವ್ಯಾಪ್ತಿಯ 9 ವಿಭಾಗಗಳಡಿಯಲ್ಲಿ 52 ಘಟಕಗಳನ್ನು ಹೊಂದಿದೆ. ದಿನಾಂಕ 31–03–2020ರಂದು ಇದ್ದಂತೆ, ಘಟಕಗಳ ಸಂಖ್ಯೆ ಮತ್ತು ಅನುಸೂಚಿಗಳ ಸಂಖ್ಯೆ ಕುರಿತ ವಿಭಾಗವಾರು ಮಾಹಿತಿಯನ್ನು ಕಳೆದ ವರ್ಷದದೊಂದಿಗೆ ಹೋಲಿಸಿ **ತ:ಖ್ತೆ–1**ರಲ್ಲಿ ನೀಡಲಾಗಿದೆ.

ತ:ಖ್ತೆ–1

ಕ್ರ. ಸಂ.	ವಿಭಾಗ	31–03–2019ರಂದು ಇದ್ದಂತೆ		31–03–2020ರಂದು ಇದ್ದಂತೆ	
		ಘಟಕಗಳು	ಅನುಸೂಚಿಗಳು	ಘಟಕಗಳು	ಅನುಸೂಚಿಗಳು
1	ಕಲಬುರಗಿ–1	6	437	6	417
2	ಕಲಬುರಗಿ–2	5	432	5	437
3	ಯಾದಗಿರಿ	4	340	4	334
4	ಬೀದರ್	6	555	6	548
5	ರಾಯಚೂರು	8	612	7	590
6	ಕೊಪ್ಪಳ	5	424	5	410
7	ಬಳ್ಳಾರಿ	5	377	5	364
8	ವಿಜಯಪುರ	8	705	8	701
9	ಹೊಸಪೇಟೆ	5	403	6	451
	ಒಟ್ಟು	**52**	**4285**	**52**	**4252**

3.2 ಸಿಬ್ಬಂದಿ ಸ್ಥಿತಿ ಮತ್ತು ಸಿಬ್ಬಂದಿ ಅನುಪಾತ:

3.2.1 ಸಿಬ್ಬಂದಿ ಸ್ಥಿತಿ:

ದಿನಾಂಕ 31–03–2020ರಂದು ಸಂಸ್ಥೆಯಲ್ಲಿ ಒಟ್ಟು 20376 ನೌಕರರಿದ್ದರು. ವರ್ಗವಾರು ವಿವರವನ್ನು **ತ:ಖ್ತೆ–2**ರಲ್ಲಿ ನೀಡಲಾಗಿದೆ.

ತ:ಖ್ತೆ–2

ಕ್ರ. ಸಂ.	ವರ್ಗ	ನೌಕರರ ಸಂಖ್ಯೆ 31–03–2019ರಂದು ಇದ್ದಂತೆ	ನೌಕರರ ಸಂಖ್ಯೆ 31–03–2020ರಂದು ಇದ್ದಂತೆ.
1	**ಖಾಯಂ ಸಿಬ್ಬಂದಿ:** ದರ್ಜೆ–1 ಮತ್ತು ದರ್ಜೆ– 2 ಅಧಿಕಾರಿಗಳು	152	163
2	ದರ್ಜೆ–3 ಮತ್ತು ದರ್ಜೆ–4 ನೌಕರರು		

	1. ಚಾಲಕರು	5699	5458
	2. ಚಾಲಕ–ಕಂ–ನಿರ್ವಾಹಕರು	6748	6694
	3. ನಿರ್ವಾಹಕರು	1920	1698
	4. ಸಂಚಾರ ಮೇಲ್ವಿಚಾರಕ ಸಿಬ್ಬಂದಿ	74	737
	5. ತಾಂತ್ರಿಕ ಸಿಬ್ಬಂದಿ	3196	3325
	6. ಆಡಳಿತ ಸಿಬ್ಬಂದಿ	2768	1947
	7. ಕಾಮಗಾರಿ ಸಿಬ್ಬಂದಿ	17	9
	ಒಟ್ಟು (ವರ್ಗ 3 &4)	**20422**	**19868**
	ಒಟ್ಟು ಸಿಬ್ಬಂದಿ	**20574**	**20376**

ದಿನಾಂಕ 31–03–2020ರಂದು ದರ್ಜೆ–1 ಮತ್ತು ದರ್ಜೆ–2 ಅಧಿಕಾರಿಗಳ ಒಟ್ಟು ಸಂಖ್ಯೆ 163 ಆಗಿದ್ದು, ಅವರ ಸಂಖ್ಯೆಯು, ಸಂಸ್ಥೆಯ ಒಟ್ಟು ನೌಕರರ ಸಂಖ್ಯೆಯ ಶೇ.0.80ರಷ್ಟಿದೆ. ಅಧಿಕಾರಿಗಳ ಹಾಗೂ ಒಟ್ಟು ನೌಕರರ ಸಂಖ್ಯೆಯ ಅನುಪಾತವು 1:134 ಆಗಿರುತ್ತದೆ. ಸಂಸ್ಥೆಯಲ್ಲಿ ಒಟ್ಟು 1009 ಮಹಿಳಾ ಸಿಬ್ಬಂದಿ ಇದ್ದು, ಸಂಸ್ಥೆಯ ಒಟ್ಟು ನೌಕರರ ಸಂಖ್ಯೆಯ ಶೇ.4.95ರಷ್ಟಿದ್ದಾರೆ.

3.2.2 ಸಿಬ್ಬಂದಿ ಪ್ರಮಾಣ/ಅನುಪಾತ:

ವರದಿ ವರ್ಷದ ಕೊನೆಯಲ್ಲಿ ಒಟ್ಟು 4252 ಅನುಸೂಚಿಗಳ ಕಾರ್ಯಾಚರಣೆಗಾಗಿ 20087 ಖಾಯಂ ನೌಕರರು ಕೆಲಸ ನಿರ್ವಹಿಸುತ್ತಿದ್ದರು. ವಿಭಾಗಗಳಲ್ಲಿ ಪ್ರತಿ ಅನುಸೂಚಿಗೆ ನೌಕರರ ಪ್ರಮಾಣ (ಅಧಿಕಾರಿಗಳು ಸೇರಿ) 4.72 ಆಗಿರುತ್ತದೆ. ಸಂಸ್ಥೆಯ ಕೇಂದ್ರ ಕಛೇರಿ, ಪ್ರಾದೇಶಿಕ ತರಬೇತಿ ಕೇಂದ್ರಗಳು, ಪ್ರಾದೇಶಿಕ ಕಾರ್ಯಾಗಾರ ಮತ್ತು ಕಾಮಗಾರಿ ವಿಭಾಗಗಳು ಸೇರಿದಂತೆ, ನೌಕರರ ಪ್ರಮಾಣವು ಪ್ರತಿ ಅನುಸೂಚಿಗೆ 4.79 ಆಗಿರುತ್ತದೆ. ವಿಭಾಗವಾರು ಅನುಸೂಚಿಗಳು ಮತ್ತು ಸಿಬ್ಬಂದಿ ವಿವರವನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ. ಸಿಬ್ಬಂದಿ ಸಂಖ್ಯೆ ಮತ್ತು ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ/ಅನುಪಾತ ವಿವರವನ್ನು **ತ:ಖ್ತೆ–3**ರಲ್ಲಿ ನೀಡಲಾಗಿದೆ. ದಿನಾಂಕ 31–03–2020ರಂದು ಇದ್ದಂತೆ, ವರ್ಗವಾರು ವೇತನ ಶ್ರೇಣಿಗಳ ವಿವರವನ್ನು **ಅನುಸೂಚಿ–'ಆ'**ದಲ್ಲಿ ನೀಡಲಾಗಿದೆ.

ತ:ಖ್ತೆ–3

ಕ್ರ. ಸಂ.	ವಿಭಾಗ/ಕಛೇರಿ	31–03–2019ರಂದು ಇದ್ದಂತೆ		31–03–2020ರಂದು ಇದ್ದಂತೆ	
		ಸಿಬ್ಬಂದಿ	ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ	ಸಿಬ್ಬಂದಿ	ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ
1	ಕಾರ್ಯಾಚರಣೆ ವಿಭಾಗಗಳು	20282	4.73	20087	4.72
2	ಕೇಂದ್ರ ಕಛೇರಿ/ ತರಬೇತಿ ಕೇಂದ್ರಗಳು/ ಕಾಮಗಾರಿ ವಿಭಾಗಗಳು/ ಪ್ರಾ.ಕಾ	292	0.07	289	0.07
ಒಟ್ಟು		**20574**	**4.80**	**20376**	**4.79**

3.3 ನೇಮಕಾತಿ:

ವರದಿ ವರ್ಷದಲ್ಲಿ ಯಾವುದೇ ಹುದ್ದೆಯನ್ನು (ನೇರ ನೇಮಕಾತಿ ಮೂಲಕ) ಭರ್ತಿ ಮಾಡಿಕೊಂಡಿರುವುದಿಲ್ಲ.

ತ:ಖ್ತೆ–4

ಕ್ರ. ಸಂ.	ವರ್ಗ	2019–20ರಲ್ಲಿ ನೇಮಕಗೊಂಡವರ ಸಂಖ್ಯೆ			
		ಪ.ಜಾ.	ಪ.ಪಂ	ಇತರರು	ಒಟ್ಟು
1	ಚಾಲಕರು	–	–	–	–
2	ಚಾಲಕ–ಕಂ–ನಿರ್ವಾಹಕರು	–	–	–	–

ದಿನಾಂಕ 31–03–2020ರಂದು ಕಾರ್ಯನಿರ್ವಹಿಸುತ್ತಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಸಂಖ್ಯೆಯ ವಿವರವನ್ನು **ತ:ಖ್ತೆ–5**ರಲ್ಲಿ ನೀಡಲಾಗಿದೆ.

ತ:ಖ್ತೆ–5

ಕ್ರ ಸಂ.	ಹುದ್ದೆ	31–03–2019ರಂದು ಇದ್ದಂತೆ			31–03–2020ರಂದು ಇದ್ದಂತೆ		
		ಒಟ್ಟು	ಪ.ಜಾ.	ಪ.ಪಂ.	ಒಟ್ಟು	ಪ.ಜಾ.	ಪ.ಪಂ.
1	ದರ್ಜೆ–1 ಮತ್ತು ದರ್ಜೆ–2 ಅಧಿಕಾರಿಗಳು	152	28	9	163	31	12
2	ದಜೆ–3 ಮತ್ತು ದರ್ಜೆ–4 ನೌಕರರು :						
	ಅ) ಆಡಳಿತ ಸಿಬ್ಬಂದಿ	2784	542	159	2657	536	164
	ಆ) ಸಂಚಾರ ಸಿಬ್ಬಂದಿ						
	1) ಮೇಲ್ವಿಚಾರಕ ಸಿಬ್ಬಂದಿ	75	25	2	143	63	16
	2) ಚಾಲನಾ ಸಿಬ್ಬಂದಿ	14367	2785	714	14024	2729	696
	ಇ) ತಾಂತ್ರಿಕ ಸಿಬ್ಬಂದಿ	3196	640	168	3389	664	183
	ಒಟ್ಟು (2)	**20422**	**3992**	**1043**	**20204**	**3992**	**1059**
ಒಟ್ಟು (1+2)		**20574**	**4020**	**1052**	**20376**	**4023**	**1071**

3.4 ತರಬೇತಿ ಕಾರ್ಯಕ್ರಮಗಳು:

ವರದಿ ವರ್ಷದಲ್ಲಿ ವಿವಿಧ ವರ್ಗದ ಅಧಿಕಾರಿಗಳಿಗೆ/ನೌಕರರಿಗೆ ಸಂಸ್ಥೆಯ ತರಬೇತಿ ಕೇಂದ್ರಗಳಲ್ಲಿ ಮತ್ತು ಹೊರಗಿನ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡಲಾಗಿದೆ.

ವಿವಿಧ ವರ್ಗದ ಒಟ್ಟು 2095 ನೌಕರರಿಗೆ ತರಬೇತಿಯನ್ನು ಪ್ರಾದೇಶಿಕ ತರಬೇತಿ ಕೇಂದ್ರ, ಹುಮನಾಬಾದ್ ಹಾಗೂ ಚಾಲಕರ ತರಬೇತಿ ಕೇಂದ್ರ, ಹಗರಿಬೊಮ್ಮನಹಳ್ಳಿ ಇವುಗಳಲ್ಲಿ ನೀಡಲಾಗಿದೆ. ವಿವರಗಳನ್ನು ತಖ್ತೆ–6ರಲ್ಲಿ ನೀಡಲಾಗಿದೆ.

ತ:ಖ್ತೆ–6

ಕ್ರ. ಸಂ.	ತರಬೇತಿ ಕೇಂದ್ರದ ಹೆಸರು	ತರಬೇತಿ ಪಡೆದವರ ಸಂಖ್ಯೆ	ತರಬೇತಿಯ ವಿಷಯ/ಸ್ವರೂಪ
1	ಚಾಲಕರ ತರಬೇತಿ ಕೇಂದ್ರ, ಹ.ಬೊ.ಹಳ್ಳಿ	625	ಪುನಶ್ಚೇತನ ತರಬೇತಿ
2	ಪ್ರಾದೇಶಿಕ ತರಬೇತಿ ಕೇಂದ್ರ, ಹುಮನಾಬಾದ್	1470	ಪುನಶ್ಚೇತನ ತರಬೇತಿ
ಒಟ್ಟು		**2095**	

3.5 ಬಹುಮಾನಗಳು :

ನೌಕರರ ಕೆಲಸದಲ್ಲಿನ ಅತ್ಯುತ್ತಮ ಕಾರ್ಯದಕ್ಷತೆ, ಪ್ರಾಮಾಣಿಕತೆ, ಅನುಕರಣೀಯ ನಡತೆ, ಪ್ರಶಂಸನಾರ್ಹ ಸೇವೆ, ಇತ್ಯಾದಿಯನ್ನು ಗುರುತಿಸಿ, ನಗದು ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡುವ ಪದ್ಧತಿ ಸಂಸ್ಥೆಯಲ್ಲಿ ಜಾರಿಯಲ್ಲಿದೆ. ವರದಿ ವರ್ಷದಲ್ಲೂ ವಿಭಾಗಗಳ ವಿವಿಧ ವರ್ಗದ ಅರ್ಹ ನೌಕರರನ್ನು ಗುರುತಿಸಿ ಅವರಿಗೆ ಬಹುಮಾನವನ್ನು ನೀಡಲಾಗಿದೆ. ಅದರಂತೆ ಅಪಘಾತ ರಹಿತ ಚಾಲಕರಿಗೆ ಸುವರ್ಣ ಪದಕ ಹಾಗೂ ಬೆಳ್ಳಿ ಪದಕ ಬಹುಮಾನಗಳನ್ನು ನೀಡಲಾಗುತ್ತಿದೆ.

3.6 ಶಿಸ್ತು ಮತ್ತು ಗೈರುಹಾಜರಾತಿ ಪ್ರಕರಣಗಳು :

ವರದಿ ವರ್ಷದಲ್ಲಿ ದಾಖಲಾದ, ವಿಲೇವಾರಿಗೊಂಡ ಮತ್ತು ವರ್ಷಾಂತ್ಯಕ್ಕೆ ಬಾಕಿ ಉಳಿದ ಶಿಸ್ತು ಮತ್ತು ಗೈರುಹಾಜರಾತಿ ಪ್ರಕರಣಗಳ ಸಂಖ್ಯೆಯ ವಿವರವನ್ನು **ತ:ಖ್ತೆ–7**ರಲ್ಲಿ ನೀಡಲಾಗಿದೆ.

ತ:ಖ್ತೆ–7

ಕ್ರ. ಸಂ.	ವಿವರ	2018–19		2019–20	
		ಗೈರು–ಹಾಜರಾತಿ	ಶಿಸ್ತು	ಗೈರು–ಹಾಜರಾತಿ	ಶಿಸ್ತು
1	ಹಿಂದಿನ ವರ್ಷದ ಕೊನೆಯ ದಿನದಂದು ಬಾಕಿಯಿದ್ದ ಪ್ರಕರಣಗಳ ಸಂಖ್ಯೆ	2055	3304	2189	3287
2	ವರದಿ ವರ್ಷದಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ :				
	ಅ) ನಿರ್ವಾಹಕರಿಗೆ ಸಂಬಂಧಿಸಿದಂತೆ	970	6197	1225	6298
	ಆ) ಚಾಲಕರಿಗೆ ಸಂಬಂಧಿಸಿದಂತೆ	2951	4217	2713	3625
	ಇ) ಇತರ ಸಿಬ್ಬಂದಿಗೆ ಸಂಬಂಧಿಸಿದಂತೆ	1518	3897	1716	4830
	ಒಟ್ಟು (2)	**5439**	**14311**	**5654**	**14753**
3	ಅಮಾನತ್ತು (ನಿರ್ದಿಷ್ಟ ಶಿಕ್ಷೆಯಾಗಿ)	0	0	0	0
4	ವಿಲೇವಾರಿಗೊಂಡ ಪ್ರಕರಣಗಳ ಸಂಖ್ಯೆ :				
	ಅ) ವಜಾ/ಬಿಡುಗಡೆ/ತೆಗೆದುಹಾಕಲ್ಪಟ್ಟ	108	48	104	29

	ಆ) ಜುಲ್ಮಾನೆ	2232	4270	2261	4259
	ಇ) ಇತರ ಶಿಕ್ಷೆಗಳು	2965	10010	3840	10609
	ಒಟ್ಟು (4)	**5305**	**14328**	**6205**	**14897**
5	ವರ್ಷದ ಕೊನೆಯ ದಿನದಂದು ಬಾಕಿಯಿದ್ದ ಪ್ರಕರಣಗಳ ಸಂಖ್ಯೆ	**2189**	**3287**	**1638**	**3143**

ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದರ್ಜೆ–3 ಮತ್ತು ದರ್ಜೆ–4ರ ವರ್ಗದ ಸಿಬ್ಬಂದಿಯ ಮೇಲೆ ಗುರುತರ ಶಿಕ್ಷೆಯನ್ನು ವಿಧಿಸುವ ಅಧಿಕಾರವನ್ನು ಆಯಾ ವಿಭಾಗದ ಮುಖ್ಯಸ್ಥರು ಹೊಂದಿರುತ್ತಾರೆ. ವಿಭಾಗ ಮಟ್ಟದ ಶಾಖಾ ಮುಖ್ಯಸ್ಥರು ಮತ್ತು ಘಟಕ ವ್ಯವಸ್ಥಾಪಕರು ಸಹ ಅವರವರ ಆಡಳಿತ ನಿಯಂತ್ರಣಕ್ಕೆ ಒಳಪಡುವ ದರ್ಜೆ–3 ಮತ್ತು ದರ್ಜೆ–4 ನೌಕರರಿಗೆ ಲಘು ಶಿಕ್ಷೆಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತಾರೆ.

*****

ಪರಿಚ್ಛೇದ 4

ಕಾರ್ಯಾಚರಣೆ

4.0 ರಾಷ್ಟ್ರೀಕರಣ ಯೋಜನೆಗಳು :

2019–20ನೇ ವರ್ಷದಲ್ಲಿ ಯಾವುದೇ ಹೊಸ ರಾಷ್ಟ್ರೀಕರಣ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ. ಆದಾಗ್ಯೂ, ಕರ್ನಾಟಕ ಸರ್ಕಾರವು ಸಮಗ್ರ ಪ್ರದೇಶಾಭಿವೃದ್ಧಿ ಯೋಜನೆಯನ್ನು ಅಧಿಸೂಚನೆ ಸಂಖ್ಯೆ ಸಾರಿಇ 174 ಎಸ್ಎಇಪಿಎ 2015, ಬೆಂಗಳೂರು ದಿನಾಂಕ 07.03.2019ಅನ್ನು ಪ್ರಕಟಿಸಿದೆ.

4.1 ಹೊಸ ವಿಭಾಗ ಮತ್ತು ಘಟಕಗಳ ಪ್ರಾರಂಭ :

ದಿನಾಂಕ 31–03–2020ರಂದು ಸಂಸ್ಥೆಯಲ್ಲಿ ಒಟ್ಟು 9 ವಿಭಾಗಗಳು ಮತ್ತು 52 ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು. ವರದಿ ವರ್ಷದಲ್ಲಿ ದಿನಾಂಕ 01.03.2020ರಿಂದ ರಾಯಚೂರು ವಿಭಾಗದಲ್ಲಿ ರಾಯಚೂರು ಘಟಕ–1ಅನ್ನು ರಾಯಚೂರು ಘಟಕ 2 ಮತ್ತು 3ರಲ್ಲಿ ವಿಲೀನಗೊಳಿಸಲಾಗಿರುತ್ತದೆ. ಅಲ್ಲದೆ ದಿನಾಂಕ 01.11.2019ರಿಂದ ಜಾರಿಗೆ ಬರುವಂತೆ ಕ.ರಾ.ರ.ಸಾ.ಸಂಸ್ಥೆಯ ದಾವಣಗೇರೆ ವಿಭಾಗದ ಹರಪನಹಳ್ಳಿ ಘಟಕವನ್ನು ಈ.ಕ.ರ.ಸಾ.ಸಂಸ್ಥೆಯ ಹೊಸಪೇಟೆ ವಿಭಾಗಕ್ಕೆ ವರ್ಗಾಯಿಸಲಾಗಿರುತ್ತದೆ.

4.2 ಮಾರ್ಗಗಳು, ಮಾರ್ಗ ಕಿ.ಮೀ.ಗಳು, ಅನುಸೂಚಿಗಳು ಮತ್ತು ಅನುಸೂಚಿ ಕಿ.ಮೀ.ಗಳು :

ದಿನಾಂಕ 31–03–2020ರಂದು ಒಟ್ಟು 3790 ಮಾರ್ಗಗಳು ಕಾರ್ಯಾಚರಣೆಯಲ್ಲಿದ್ದವು. ಸರಾಸರಿ ಕ್ರಮಿಸಿದ ಮಾರ್ಗ ದೂರ 96.55 ಕಿ.ಮೀ.ಗಳಿರುತ್ತದೆ.

ದಿನಾಂಕ 31–03–2020ರಂದು ಇದ್ದಂತೆ, ಮಾರ್ಗಗಳು, ಮಾರ್ಗ ಕಿ.ಮೀ.ಗಳು, ಅನುಸೂಚಿಗಳು ಮತ್ತು ಅನುಸೂಚಿ ಕಿ.ಮೀ.ಗಳ ವಿವರವನ್ನು **ತ:ಖ್ತೆ–8**ರಲ್ಲಿ ನೀಡಲಾಗಿದೆ.

ತ:ಖ್ತೆ–8

ಕ್ರ. ಸಂ.	ವಿವರ	ಮಾರ್ಚ್ 31ರಂದು ಇದ್ದಂತೆ		ವ್ಯತ್ಯಾಸ	
		2019	**2020**	**ವಾಸ್ತವಿಕ**	**ಶೇ.**
1	ಮಾರ್ಗಗಳ ಸಂಖ್ಯೆ	3990	3790	–200	–5
2	ಮಾರ್ಗ ಕಿ.ಮೀ.ಗಳು	417213	365943	–51270	–12.3
3	ಮಾರ್ಗ ದೂರ (ಸರಾಸರಿ ಕಿ.ಮೀ.ಗಳು)	104.56	96.55	–8.01	–7.7
4	ಅನುಸೂಚಿಗಳ ಸಂಖ್ಯೆ	4285	4252	–33	–0.8
5	ದೈನಿಕ ಅನುಸೂಚಿ ಕಿ.ಮೀ.ಗಳು (ಲಕ್ಷದಲ್ಲಿ)	1533289	1524928	–8361	–0.5

ದಿನಾಂಕ 31–03–2020ರಂದು ಇದ್ದಂತೆ, ವಿಭಾಗವಾರು ಮಾರ್ಗ ಮತ್ತು ಮಾರ್ಗ ಕಿ.ಮೀ.ಗಳ ವಿವರವನ್ನು **ಅನುಬಂಧ–2**ರಲ್ಲಿ ನೀಡಲಾಗಿದೆ.

4.3 ಅಂತರರಾಜ್ಯ ಮಾರ್ಗಗಳು :

ನೆರೆ ರಾಜ್ಯಗಳ ಜೊತೆ ಪರಸ್ಪರ ಒಪ್ಪಂದದ ಮೇರೆಗೆ ಅಂತರರಾಜ್ಯ ಮಾರ್ಗಗಳ ಕಾರ್ಯಾಚರಣೆ ವಿವರವನ್ನು **ತ:ಖ್ತೆ–9** ರಲ್ಲಿ ಕೊಡಲಾಗಿದೆ.

ತ:ಖ್ತೆ–9

ಕ್ರ. ಸಂ.	ರಾಜ್ಯ	ಮಾರ್ಗಗಳ ಸಂಖ್ಯೆ	ಅನುಸೂಚಿಗಳ ಸಂಖ್ಯೆ	ಅನುಸೂಚಿ ಕಿ.ಮೀ.ಗಳು		
				ರಾಜ್ಯದ ಒಳಗೆ	ರಾಜ್ಯದ ಹೊರಗೆ	ಒಟ್ಟು
1	ಆಂಧ್ರ ಪ್ರದೇಶ	69	139	27537	30307	57844
2	ತೆಲಂಗಾಣ	113	237	46752	53064	99817
3	ಗೋವಾ	17	40	15028	3306	18334
4	ಮಹಾರಾಷ್ಟ್ರ	257	432	99359	74940	174299
5	ತಮಿಳುನಾಡು (ಪುದುಚೇರಿ ಒಳಗೊಂಡು)	1	2	50	1046	1096
	ಒಟ್ಟು	**457**	**850**	**188726**	**162663**	**351389**

4.4 ಸಾರಿಗೆ ಸೇವೆಗಳು :

(ಅ) ನಗರ ಸಾರಿಗೆ :

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ, ಗಂಗಾವತಿ, ಸೇಡಂ, ಹೊಸಪೇಟೆ, ವಿಜಯಪುರ ನಗರ/ಪಟ್ಟಣಗಳಲ್ಲಿ ನಗರಸಾರಿಗೆ ಸೇವೆ ಮತ್ತು ಉಪನಗರ ಸಾರಿಗೆ ಸೇವೆಗಳನ್ನು ಮುಂದುವರೆಸಲಾಗಿದೆ. ಸದರಿ ನಗರ ಸಾರಿಗೆ ವಾಹನಗಳಲ್ಲಿ ಗಣಕೀಕೃತ ಮಾರ್ಗಫಲಕಗಳನ್ನು ಅಳವಡಿಸಿದ್ದು, ಅವುಗಳು ಅನುಸೂಚಿತ ಮಾರ್ಗದಲ್ಲಿ ಪ್ರಯಾಣಿಕರಿಗೆ ವಾಹನ ತಲುಪಿದ ನಿಲುಗಡೆ ಮತ್ತು ನಂತರ ಬರುವ ನಿಲುಗಡೆಯ ಮಾಹಿತಿಯನ್ನು ಪ್ರಕಟಿಸುವ ಸ್ವಯಂಚಾಲಿತ ಪ್ರಕಟಣಾ ವ್ಯವಸ್ಥೆ (ಆಟೊಮ್ಯಾಟಿಕ್ ಅನೌನ್ಸ್‌ಮೆಂಟ್ ಸಿಸ್ಟಮ್) ಸೌಲಭ್ಯವನ್ನು ಹೊಂದಿರುತ್ತದೆ.

ದಿನಾಂಕ 31–03–2020ರಂದು ನಗರ ಸಾರಿಗೆ ಮತ್ತು ಉಪನಗರ ಸೇವೆಗಳ ದೈನಿಕ ಅನುಸೂಚಿ ಕಿ.ಮೀ.ಗಳು 50125 ಆಗಿರುತ್ತದೆ. ಇದು ಸಂಸ್ಥೆಯ ಒಟ್ಟು ಅನುಸೂಚಿ ಕಿ.ಮೀ.ಗಳ ಶೇ.3.29ರಷ್ಟಿರುತ್ತದೆ. ನಗರಸಾರಿಗೆ ಸೇವೆಗಳ ವಿವರವನ್ನು **ತ:ಖ್ತೆ–10**ರಲ್ಲಿ ಕೊಡಲಾಗಿದೆ.

ತ:ಖ್ತೆ–10

ಕ್ರ. ಸಂ.	ನಗರ/ಪಟ್ಟಣ	ಮಾರ್ಗಗಳು		ಮಾರ್ಗ ಕಿ.ಮೀ.ಗಳು		ಅನುಸೂಚಿಗಳು		ದೈನಿಕ ಅನುಸೂಚಿ ಕಿ.ಮೀ.ಗಳು	
		18–19	19–20	18–19	19–20	18–19	19–20	18–19	19–20
1	ಕಲಬುರಗಿ–1	97	80	833	752	98	71	20191	12454
2	ಸೇಡಂ	9	10	62	75	3	3	537	543
3	ಯಾದಗಿರಿ	9	15	51	107	9	11	1408	2073
4	ರಾಯಚೂರು	21	21	250	248	42	26	7876	4787
5	ಸಿಂಧನೂರು	4	0	85	0	6	0	1604	0
6	ಬಳ್ಳಾರಿ	38	35	376	345	39	37	5181	5662
7	ಕೊಪ್ಪಳ	30	32	414	515	12	12	5835	5835
8	ಗಂಗಾವತಿ	36	30	822	794	18	18	4294	4294

9	ಬೀದರ್	10	14	50	143	17	17	2638	2638
10	ವಿಜಯಪುರ	36	36	360	360	55	45	8755	7154
11	ಹೊಸಪೇಟೆ	20	23	214	278	44	26	9791	4685
	ಒಟ್ಟು	**310**	**296**	**3517**	**3617**	**343**	**266**	**68110**	**50125**

(ಆ) ಗ್ರಾಮಾಂತರ ಸಾರಿಗೆ :

ವರದಿ ವರ್ಷದ ಕೊನೆ ದಿನದಂದು ಸಾಮಾನ್ಯ ಸಾರಿಗೆ ಸೇವೆಗಳ ಕಾರ್ಯಾಚರಣೆ ಪ್ರಮಾಣವು (ನಗರ ಮತ್ತು ಉಪನಗರ ಸೇವೆಗಳು ಒಳಗೊಂಡಂತೆ) ಸಂಸ್ಥೆಯ ಒಟ್ಟು ಸಾರಿಗೆ ಸೇವೆಗಳ ಕಾರ್ಯಾಚರಣೆಯ ಶೇ.42.5ರಷ್ಟಿದ್ದು, ದೈನಿಕ ಅನುಸೂಚಿ ಕಿ.ಮೀ.ಗಳು 648021 ಆಗಿರುತ್ತದೆ. ಸಂಸ್ಥೆಯು ಸಾಮಾನ್ಯ ಸಾರಿಗೆ ಸೇವೆಗಳನ್ನು ಗ್ರಾಮಾಂತರ ಮಾರ್ಗಗಳಲ್ಲಿ ಕಾರ್ಯಾಚರಿಸುವ ಜೊತೆಗೆ, ವೇಗದೂತ, ತಡೆರಹಿತ ಮತ್ತು ರಾತ್ರಿ ಸೇವೆಗಳ (ಸುಖಾಸೀನ ಮತ್ತು ರಾಜಹಂಸ ಸಾರಿಗೆ ಸೇವೆಗಳನ್ನೊಳಗೊಂಡಂತೆ) ಸೌಲಭ್ಯವನ್ನು ಸಹ ಒದಗಿಸಿದೆ. ದಿನಾಂಕ 31–03–2020ರಂದು ಇದ್ದಂತೆ, ಸೇವಾವಾರು ಕಾರ್ಯಾಚರಣೆ ವಿವರವನ್ನು **ತ:ಖ್ತೆ–11**ರಲ್ಲಿ ಕೊಡಲಾಗಿದೆ.

ತ:ಖ್ತೆ–11

ಕ್ರ. ಸಂ.	ಸೇವಾ ಮಾದರಿ	ದೈನಿಕ ಅನುಸೂಚಿ ಕಿ.ಮೀ.ಗಳು		ಒಟ್ಟು ಕಾರ್ಯಾಚರಣೆಯ ಶೇ. ಪ್ರಮಾಣ	
		2018–19	**2019–20**	**2018–19**	**2019–20**
1	ಸಾಮಾನ್ಯ, ನಗರ ಸಾರಿಗೆ ಮತ್ತು ಉಪನಗರ	636332	648021	41.5	42.5
2	ವೇಗದೂತ	819189	797299	53.4	52.3
3	ಸುಖಾಸೀನ/ರಾಜಹಂಸ	27178	26788	1.8	1.8
4	ಹವಾನಿಯಂತ್ರಿತರಹಿತ ಸ್ಲೀಪರ	45032	45208	2.9	3.0
5	ಹವಾನಿಯಂತ್ರಿತ ಜಂಬೂ ಮತ್ತು ಹವಾನಿಯಂತ್ರಿತ ಸ್ಲೀಪರ್	5558	7612	0.4	0.5
ಒಟ್ಟು		**1533289**	**1524928**	**100.0**	**100.0**

(i) ದೂರಮಾರ್ಗದ ಮತ್ತು ರಾತ್ರಿ ಪ್ರಯಾಣದ ಸಾರಿಗೆ ಸೇವೆಗಳು: ಸಂಸ್ಥೆಯು ವಿಭಾಗೀಯ ಕೇಂದ್ರ ಸ್ಥಳಗಳ ಮತ್ತು ತಾಲೂಕು ಕೇಂದ್ರಗಳ ನಡುವೆ, ತಾಲೂಕು ಕೇಂದ್ರಗಳಿಂದ ಬೆಂಗಳೂರಿಗೆ ಮತ್ತು ರಾಜ್ಯದ ಹಾಗೂ ನೆರೆ ರಾಜ್ಯದ ಕೆಲವು ಪ್ರಮುಖ ಸ್ಥಳಗಳಿಗೆ ಶೀಘ್ರ ಸಾರಿಗೆ ಸಂಪರ್ಕವನ್ನು ಒದಗಿಸುವುದಕ್ಕಾಗಿ ದೂರ ಮಾರ್ಗ ಮತ್ತು ರಾತ್ರಿ ಸೇವೆಗಳನ್ನು ಕಾರ್ಯಾಚರಿಸುತ್ತಿದೆ. ದಿನಾಂಕ 31–03–2020ರಂದು ಇದ್ದಂತೆ, 300 ಕಿ.ಮೀ.ಗಳಿಂದ 650 ಕಿ.ಮೀ.ಗಳವರೆಗಿನ ಮಾರ್ಗ ದೂರವಿರುವ ಸುಮಾರು 800 ಮಾರ್ಗಗಳಲ್ಲಿ ದೂರ ಪ್ರಯಾಣ ಸಾರಿಗೆ ಸೇವೆಗಳನ್ನು ಕಾರ್ಯಾಚರಣೆ ಮಾಡಲಾಗಿದೆ. ದೂರಮಾರ್ಗ ಸಾರಿಗೆ ಸೇವೆಗಳನ್ನು ಜಿಲ್ಲಾ ಕೇಂದ್ರಗಳಿಂದ ರಾಜ್ಯದ ಮತ್ತು ಹೊರ ರಾಜ್ಯದ ಕೆಲವು ಪ್ರಮುಖ ಸ್ಥಳಗಳಿಗೆ ಸಂಪರ್ಕ ಒದಗಿಸಲು ಕಾರ್ಯಾಚರಣೆ ಮಾಡುತ್ತಿದ್ದು, ಅವುಗಳಲ್ಲಿ ಬಹುತೇಕ ಅನುಸೂಚಿಗಳು ರಾತ್ರಿ ಸೇವೆಗಳಾಗಿವೆ.

(ii) ವೇಗದೂತ ಮತ್ತು ತಡೆರಹಿತ ಸಾರಿಗೆ ಸೇವೆಗಳು: ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸುವುದಕ್ಕಾಗಿ ಕಡಿಮೆ ಸಂಖ್ಯೆಯ ನಿಲುಗಡೆ ಕಲ್ಪಿಸಿರುವ ವೇಗದೂತ ಸೇವೆಗಳನ್ನು ಮತ್ತು ಕೆಲವು ಆಯ್ದ ಮಾರ್ಗಗಳಲ್ಲಿ ತಡೆರಹಿತ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ದಿನಾಂಕ 31–03–2020ರಂದು ಇದ್ದಂತೆ, 1918 ವೇಗದೂತ

ಅನುಸೂಚಿಗಳಿಂದ ದೈನಿಕ 797299 ಕಿ.ಮೀ.ಗಳನ್ನು ಕಾರ್ಯಾಚರಣೆ ಮಾಡಲಾಗಿದ್ದು, ಇದು ಒಟ್ಟು ಕಾರ್ಯಾಚರಣೆಯ ಶೇ.52.28ರಷ್ಟು ಆಗಿರುತ್ತದೆ.

(iii) ಸುಖಾಸೀನ, ಹೈ–ಟೆಕ್ ಮತ್ತು ಹವಾನಿಯಂತ್ರಿತ ಸಾರಿಗೆ ಸೇವೆಗಳು: ಹಿತಕರ ಪ್ರಯಾಣದ ಅವಶ್ಯಕತೆಗಳನ್ನು ಪೂರೈಸಲು, ಸಂಸ್ಥೆಯು ಪ್ರಯಾಣಿಕರಿಗಾಗಿ ಬಹುತೇಕ ಸುಖಾಸೀನ ಪ್ರತಿಷ್ಠಿತ ಸಾರಿಗೆ ಸೇವೆಗಳನ್ನು ರಾತ್ರಿ ವೇಳೆಯಲ್ಲಿ ಕಾರ್ಯಾಚರಿಸುತ್ತಿದೆ. ದಿನಾಂಕ 31–03–2020ರಂದು, 58 ಸುಖಾಸೀನ/ಹೈ–ಟೆಕ್/ರಾಜಹಂಸ, 18 ಹವಾನಿಯಂತ್ರಿತ, 104 ಹವಾನಿಯಂತ್ರಿತರಹಿತ ಸ್ಲೀಪರ್ ಸಾರಿಗೆ ಸೇವೆಗಳು ಕಾರ್ಯಾಚರಣೆಯಲ್ಲಿದ್ದವು. ಸುಖಾಸೀನ/ರಾಜಹಂಸ ಸಾರಿಗೆ ಸೇವೆಗಳು ದೈನಿಕ 26788 ಕಿ.ಮೀ.ಗಳನ್ನು ಕ್ರಮಿಸಿದ್ದು, ಇದು ಸಂಸ್ಥೆಯು ಕಾರ್ಯಾಚರಿಸಿದ ಒಟ್ಟು ಕಿ.ಮೀ.ಗಳ ಶೇ.1.8 ಆಗಿರುತ್ತದೆ. ಹವಾನಿಯಂತ್ರಿತ ಸಾರಿಗೆ ಸೇವೆಗಳು ದೈನಿಕ 7612 ಕಿ.ಮೀ.ಗಳನ್ನು ಕ್ರಮಿಸಿದ್ದು, ಒಟ್ಟು ಕಿ.ಮಿ.ಗಳ ಶೇ.0.5 ಆಗಿರುತ್ತದೆ. ಹವಾನಿಯಂತ್ರಿತರಹಿತ ಸಾರಿಗೆ ಸೇವೆಗಳು ದೈನಿಕ 45208 ಕಿ.ಮೀ.ಗಳನ್ನು ಕ್ರಮಿಸಿದ್ದು, ಒಟ್ಟು ಕಿ.ಮೀ.ಗಳ ಶೇ.3.0ರಷ್ಟಾಗುತ್ತದೆ.

(iv) ಪ್ರೋತ್ಸಾಹಕ ಪ್ರಯಾಣ ದರಗಳ ವ್ಯವಸ್ಥೆ: ಖಾಸಗಿ ಪ್ರವರ್ತಕರ ಪೈಪೋಟಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಮತ್ತು ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ಆಕರ್ಷಿಸಲು ಈ ಕೆಳಕಂಡ ಮಾರ್ಗಗಳಲ್ಲಿ ಪ್ರೋತ್ಸಾಹಕ ಪ್ರಯಾಣ ದರಗಳನ್ನು ನಿಗದಿಪಡಿಸಲಾಗಿದೆ.

- ಕಲಬುರಗಿ–ಬೆಂಗಳೂರು(ಎ/ಸಿ ಸ್ಲೀಪರ್)
- ಕಲಬುರಗಿ–ಧಾರವಾಡ(ನಾನ್–ಎ/ಸಿ ಸ್ಲೀಪರ್)
- ಕಲಬುರಗಿ–ಬೆಳಗಾವಿ(ನಾನ್–ಎ/ಸಿ ಸ್ಲೀಪರ್)
- ಕಲಬುರಗಿ–ಬೊರಿವೆಲಿ(ನಾನ್–ಎ/ಸಿ ಸ್ಲೀಪರ್)
- ಕಲಬುರಗಿ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ಯಾದಗಿರಿ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ಶಹಾಪೂರ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ಬಳ್ಳಾರಿ–ಚೆನ್ನೈ (ನಾನ್–ಎ/ಸಿ ಸ್ಲೀಪರ್)
- ಬಳ್ಳಾರಿ–ಹೈದ್ರಾಬಾದ್(ಎ/ಸಿ ಸ್ಲೀಪರ್)
- ಲಿಂಗಸುಗೂರು–ಬೆಂಗಳೂರು(ರಾಜಹಂಸ)
- ಹಟ್ಟಿ–ಬೆಂಗಳೂರು(ನಾನ್–ಎ/ಸಿ ಸ್ಲೀಪರ್)
- ವಿಜಯಪುರ–ಬೆಂಗಳೂರು(ರಾಜಹಂಸ)
- ವಿಜಯಪುರ–ಬೆಂಗಳೂರು(ನಾನ್–ಎ/ಸಿ ಸ್ಲೀಪರ್)
- ತಾಳಿಕೋಟೆ–ಬೆಂಗಳೂರು(ನಾನ್–ಎ/ಸಿ ಸ್ಲೀಪರ್)
- ತಾಳಿಕೋಟೆ–ಬೆಂಗಳೂರು(ರಾಜಹಂಸ/ಸುಹಾಸ)
- ಬ.ಬಾಗೇವಾಡಿ–ಬೆಂಗಳೂರು(ರಾಜಹಂಸ/ಸುಹಾಸ)
- ಹಗರಿಬೊಮ್ಮನಹಳ್ಳಿ–ಬೆಂಗಳೂರು(ನಾನ್–ಎ/ಸಿ ಸ್ಲೀಪರ್)

4.5 ಪ್ರಯಾಣ ದರಗಳು :

ಪ್ರಯಾಣ ದರಗಳನ್ನು ದಿನಾಂಕ 25/26.2.2020ರ ಮಧ್ಯರಾತ್ರಿಯಿಂದ ಜಾರಿಗೆ ಬರುವಂತೆ ಹೆಚ್ಚಿಗೆ(12.5%)ಮಾಡಲಾಗಿದೆ. ಪ್ರಯಾಣ ದರಗಳ ವಿವರವನ್ನು **ಅನುಸೂಚಿ–'ಇ'ನಲ್ಲಿ** ಕೊಡಲಾಗಿದೆ.

4.6 ಕಾರ್ಯಾಚರಣೆಯ ಪ್ರಗತಿ:

ಸಂಸ್ಥೆಯು ವರದಿ ವರ್ಷದಲ್ಲಿ ಕಾರ್ಯಾಚರಣೆಯಲ್ಲಿದ್ದ ಸಾರಿಗೆ ಸೇವೆಗಳನ್ನು ಮತ್ತಷ್ಟು ಬಲಪಡಿಸುವತ್ತ ಪ್ರಯತ್ನವನ್ನು ಮುಂದುವರಿಸಿದೆ. ಕಾರ್ಯಾಚರಣೆಯ ಪ್ರಮುಖ ಸಾಧನೆಗಳನ್ನು ಈ ಮುಂದಿನ ಅಂಕಣಗಳಲ್ಲಿ ನೀಡಲಾಗಿದೆ.

(ಅ) ಕ್ರಮಿಸಿದ ಕಿ.ಮೀ.ಗಳು :

ವರದಿ ವರ್ಷದಲ್ಲಿ ಕಾರ್ಯಾಚರಿಸಿದ ಕಿ.ಮೀ.ಗಳ ವಿವರವನ್ನು **ತ:ಖ್ತೆ–12**ರಲ್ಲಿ ಕೊಡಲಾಗಿದೆ.

ತ:ಖ್ತೆ–12

ಕ್ರ. ಸಂ.	ಕಾರ್ಯಾಚರಣೆ ವಿವರ	2018–19	2019–20
1	ಕಾರ್ಯಾಚರಣೆಯಾದ ಕಿ.ಮೀ.ಗಳು (ಲಕ್ಷ) ಅ) ಒಟ್ಟು ಕಿ.ಮೀ.ಗಳು	5306.80	5169.41
	ಆ) ಪರಿಣಾಮಕಾರಿ ಕಿ.ಮೀ.ಗಳು	5160.90	5064.17
	ಇ) ಆದಾಯರಹಿತ ಕಿ.ಮೀ.ಗಳು	145.90	105.24
2	ಪರಿಣಾಮಕಾರಿ ಕಿ.ಮೀ.ಗಳಿಗೆ ಆದಾಯರಹಿತ ಕಿ.ಮೀ.ಗಳ ಶೇ. ಪ್ರಮಾಣ	2.8	2.1
3	ದೈನಿಕ ಪರಿಣಾಮಕಾರಿ ಕಿ.ಮೀ.ಗಳು (ಲಕ್ಷ)	14.14	13.84

ವರದಿ ವರ್ಷದಲ್ಲಿ 5064.17 ಲಕ್ಷ ಪರಿಣಾಮಕಾರಿ ಕಿ.ಮೀ.ಗಳು ಕಾರ್ಯಾಚರಣೆಯಾಗಿವೆ. ಆದಾಯರಹಿತ ಕಿ.ಮೀ.ಗಳ ಶೇ. ಪ್ರಮಾಣವು (ಪರಿಣಾಮಕಾರಿ ಕಿ.ಮೀ.ಗಳಿಗೆ) ಶೇ. 2.1ರಷ್ಟು ಆಗಿದೆ. ಕಾರ್ಯಾಚರಣೆಯಾದ ಕಿ.ಮೀ.ಗಳ ವಿಭಾಗವಾರು ವಿವರವನ್ನು **ಅನುಬಂಧ–3**ರಲ್ಲಿ ಕೊಡಲಾಗಿದೆ.

(ಆ) ವಾಹನಗಳು, ಅವುಗಳ ಬಳಕೆ ಮತ್ತು ಸಂಚರಿಸಿದ ಪ್ರಯಾಣಿಕರು :

ವರದಿ ವರ್ಷದಲ್ಲಿ ಕಾರ್ಯಾಚರಣೆಗಾಗಿ ಬಳಸಲಾದ ವಾಹನಗಳ ಸಂಖ್ಯೆ ಮತ್ತು ಅವುಗಳ ಬಳಕೆಯನ್ನು ಕಳೆದ ವರ್ಷದದೊಂದಿಗೆ ಹೋಲಿಸಿ **ತಃಖ್ತೆ–13**ರಲ್ಲಿ ಕೊಡಲಾಗಿದೆ.

ತಃಖ್ತೆ–13

ಕ್ರ. ಸಂ.	ಕಾರ್ಯಾಚರಣೆ ಅಂಶಗಳು	ವರ್ಷ		ಹಿಂದಿನ ವರ್ಷಕ್ಕೆ ವ್ಯತ್ಯಾಸ	
		2018–19	2019–20	ವಾಸ್ತವಿಕ	ಶೇ.
1	ಸರಾಸರಿ ಹೊಂದಿದ ವಾಹನಗಳ ಸಂಖ್ಯೆ	4788.9	4722.5	–66.4	–1.4
2	ಸರಾಸರಿ ಓಡಾಡಿದ ವಾಹನಗಳ ಸಂಖ್ಯೆ	4134.3	4031.6	–102.7	–2.5
3	ವಾಹನ ಸಮೂಹ ಬಳಕೆ (ಶೇ.)	86.3	85.4	–1.0	–1.1
4	ಸರಾಸರಿ ವಾಹನ ಬಳಕೆ (ಕಿ.ಮೀ.ಗಳು) ಅ)ಒಟ್ಟು ಕಿ.ಮೀ.ಗಳ ಮೇಲೆ ಆ)ಪರಿಣಾಮಕಾರಿ ಕಿ.ಮೀ.ಗಳ ಮೇಲೆ	 352 342	 350 343	 –2 1	 –0.6 0.3
5	ಸರಾಸರಿ ಕೊಂಡೊಯ್ಯುವ ಸಾಮರ್ಥ್ಯ	51.3	51.1	–0.2	–0.4
6	ಕೊಂಡೊಯ್ದ ಪ್ರಯಾಣಿಕರ ಸಂಖ್ಯೆ (ಲಕ್ಷ)	4945.75	4848.06	–97.7	–1.9
7	ಸರಾಸರಿ ಪ್ರತಿದಿನ ಕೊಂಡೊಯ್ದ ಪ್ರಯಾಣಿಕರ ಸಂಖ್ಯೆ (ಲಕ್ಷ)	13.55	13.58	0.03	0.2

ವರದಿ ವರ್ಷದಲ್ಲಿ ವಿಭಾಗಗಳು ಸರಾಸರಿ ಹೊಂದಿದ ವಾಹನಗಳ ಸಂಖ್ಯೆ 4722.5 ಮತ್ತು ಸರಾಸರಿ ಓಡಾಡಿದ ವಾಹನಗಳ ಸಂಖ್ಯೆ 4031.6 ಆಗಿದ್ದು, ವಾಹನ ಸಮೂಹ ಬಳಕೆಯಲ್ಲಿ ಶೇ.85.4ರ ಸಾಧನೆಯಾಗಿದೆ. ಸರಾಸರಿ ವಾಹನ ಬಳಕೆ ಒಟ್ಟು ಕಿ.ಮೀ.ಗಳ ಮೇಲೆ 350 ಕಿ.ಮೀ.ಗಳು ಹಾಗೂ ಪರಿಣಾಮಕಾರಿ ಕಿಮೀ.ಗಳ ಮೇಲೆ 343 ಕಿ.ಮೀ.ಗಳು ಆಗಿದೆ. ವಿಭಾಗವಾರು ವಾಹನ ಬಳಕೆ, ಸರಾಸರಿ ಓಡಾಡಿದ ವಾಹನಗಳ ಮೇಲೆ ಮತ್ತು ವಾಹನ ಬಲದ ಮೇಲಿನ ವಿವರವನ್ನು **ಅನುಬಂಧ–4**ರಲ್ಲಿ ನೀಡಲಾಗಿದೆ. ವರದಿ ವರ್ಷದಲ್ಲಿ ಒಟ್ಟು 4848.06 ಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು, ಸರಾಸರಿ ಪ್ರತಿದಿನ ಕೊಂಡೊಯ್ದ ಪ್ರಯಾಣಿಕರ ಸಂಖ್ಯೆಯು 13.58 ಲಕ್ಷ ಇರುತ್ತದೆ.

(ಇ) ಸರಕು ಸರಂಜಾಮುಗಳ ಸಾಗಣೆ :

ಪ್ರತಿ ವಯಸ್ಕ ಪ್ರಯಾಣಿಕನು 30 ಕೆ.ಜಿ.ಯಷ್ಟು ಹಾಗೂ ಬಾಲ ಪ್ರಯಾಣಿಕನು 15 ಕೆ.ಜಿ.ಯಷ್ಟು ಸರಕನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಒಯ್ಯುವ ಸೌಲಭ್ಯವನ್ನು ವರದಿ ವರ್ಷದಲ್ಲಿಯೂ ಮುಂದುವರಿಸಲಾಗಿದೆ. ಇದಕ್ಕೂ ಮೇಲ್ಪಟ್ಟ ಸರಕುಗಳಿಗೆ ಕೆಳಕಂಡ ದರವನ್ನು ನಿಗದಿಪಡಿಸಲಾಗಿದೆ.

1. ಸರಕು ದರ : 20 ಕೆ.ಜಿ. ತೂಕದ ಪ್ರತಿ ಹೊರೆಗೆ 4 ಹಂತದವರೆಗೆ ರೂ.0.75 (ಕನಿಷ್ಠ ರೂ.5)
2. ವರ್ತಮಾನ ಪತ್ರಿಕೆ: ಅ) 5 ಕೆ.ಜಿ. ತೂಕದ ಪ್ರತಿ ಹೊರೆಗೆ ಅಥವಾ ಅದರ ಭಾಗಾಂಶಕ್ಕೆ (ದೂರದ ಮಿತಿಯಿಲ್ಲದಂತೆ) ರೂ. 1.50 ಆ) 5 ಕೆ.ಜಿ. ತೂಕದ ವರ್ತಮಾನ ಪತ್ರಿಕೆಗಳನ್ನು 1.0 ಯೂನಿಟ್ ಎಂದು ಪರಿಗಣಿಸಲಾಗುವುದು

(ಈ) ಬಸ್ ನಿಲ್ದಾಣಗಳು ಮತ್ತು ಪ್ರಯಾಣಿಕರ ರಸ್ತೆಯಂಚಿನ ಆಶ್ರಯದಾಣಗಳು :

31–03–2020ರಂದು ಇದ್ದಂತೆ, ಸಂಸ್ಥೆಯು ಒಟ್ಟು 154 ಖಾಯಂ ಬಸ್ ನಿಲ್ದಾಣಗಳನ್ನು, 943 ಗ್ರಾಮೀಣ ರಸ್ತೆಯಂಚಿನ ಆಶ್ರಯದಾಣಗಳನ್ನು ಮತ್ತು 130 ನಗರಸಾರಿಗೆ ಆಶ್ರಯದಾಣಗಳನ್ನು ಹೊಂದಿದೆ. ಸಂಸ್ಥೆಯು ನಿರ್ಮಿಸಿ ನಿರ್ವಹಿಸುತ್ತಿರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅತ್ಯಾವಶ್ಯಕ ಸೌಲಭ್ಯಗಳಾದ ನಿರೀಕ್ಷಣಾ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಮುಂತಾದವುಗಳನ್ನು ಒದಗಿಸಲಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ 88 ಉಪಹಾರ ಗೃಹಗಳನ್ನು, 1112 ವಿವಿಧ ವಾಣಿಜ್ಯ ಮಳಿಗೆಗಳನ್ನು ತಂಪು ಪಾನೀಯ, ಹಣ್ಣು, ಪಾನ್ ಬೀಡಾ, ಪುಸ್ತಕ, ಲೇಖನ ಸಾಮಗ್ರಿ ಇತ್ಯಾದಿ ಮಾರಾಟಕ್ಕಾಗಿ ಒದಗಿಸಲಾಗಿದೆ. ವರದಿ ವರ್ಷದ ಕೊನೆಯಲ್ಲಿ ಒದಗಿಸಲಾಗಿದ್ದ ಸೌಲಭ್ಯ ಹಾಗೂ ಅನುಕೂಲತೆಗಳನ್ನು **ತಃಖ್ತೆ–14**ರಲ್ಲಿ ಕೊಡಲಾಗಿದೆ.

ತಃಖ್ತೆ–14

ಕ್ರ. ಸಂ.	ಸೌಲಭ್ಯ	31–03–2019ರಂದು ಇದ್ದಂತೆ	31–03–2020ರಂದು ಇದ್ದಂತೆ
1	ಬಸ್ ನಿಲ್ದಾಣಗಳು	152	154
2	ಗ್ರಾಮಾಂತರ ರಸ್ತೆಯಂಚಿನ ಆಶ್ರಯದಾಣಗಳು	917	943
3	ನಗರಸಾರಿಗೆ ಆಶ್ರಯದಾಣಗಳು	160	130
4	ಉಪಹಾರ ಗೃಹಗಳು	99	88
5	ತಂಪು ಪಾನೀಯ, ಹಣ್ಣು, ಪಾನ್ ಬೀಡ, ಪುಸ್ತಕ, ಇತರ ಮಳಿಗೆಗಳು	1205	1112

(ಉ) ಮುಂಗಡ ಟಿಕೆಟ್ ಖರೀದಿ ಮತ್ತು ಆಸನ ಕಾಯ್ದಿರಿಸುವ ಸೌಲಭ್ಯಗಳು :

ಮುಂಗಡ ಟಿಕೆಟ್ ನೀಡುವ ವ್ಯವಸ್ಥೆ ವರದಿ ವರ್ಷದಲ್ಲಿಯೂ ಜಾರಿಯಲ್ಲಿದ್ದು, ಮುಂಗಡ ಟಿಕೆಟ್‌ಗಳನ್ನು 30 ದಿನ ಮುಂಚಿತವಾಗಿ ಮತ್ತು ಬಸ್ ನಿಲ್ದಾಣ ಕೌಂಟರ್‌ಗಳಲ್ಲಿ ಬಸ್ ಹೊರಡುವ ನಿಗದಿತ ಸಮಯದ ಅರ್ಧ ಗಂಟೆ ಮುಂಚಿತವರೆಗೆ ಮುಂಗಡ ಟಿಕೆಟ್ ನೀಡಲಾಗುತ್ತಿದೆ.

4 ಮತ್ತು ಅದಕ್ಕಿಂತ ಹೆಚ್ಚಿನ ಟಿಕೆಟ್‌ಗಳನ್ನು ಮುಂಗಡವಾಗಿ ಕಾಯ್ದಿರಿಸುವವರಿಗೆ ಪ್ರಯಾಣ ದರದಲ್ಲಿ ಶೇ. 5ರಷ್ಟು ರಿಯಾಯತಿ ನೀಡಲಾಗುತ್ತಿದೆ. ಹೋಗುವ ಪ್ರಯಾಣ ಮತ್ತು ಹಿಂದಿರುಗುವ ಪ್ರಯಾಣದ ಟಿಕೆಟ್‌ಗಳನ್ನು ಮುಂಗಡವಾಗಿ ಏಕಕಾಲಕ್ಕೆ ಖರೀದಿಸಿದಲ್ಲಿ, ಹಿಂದಿರುಗುವ ಪ್ರಯಾಣದ ದರದ ಶೇ. 10ರಷ್ಟು ರಿಯಾಯತಿಯನ್ನು ನೀಡಲಾಗುತ್ತಿದೆ.

ಅವತಾರ್ (AWATAR) ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಈ ವ್ಯವಸ್ಥೆಯನ್ನು ಪ್ರಯಾಣಿಕರು ಎಲ್ಲಿಯಾದರೂ ಯಾವಾಗಲಾದರೂ ಅಂತರ್‌ಜಾಲದ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಬಹುದಾಗಿದೆ. ಈ ವ್ಯವಸ್ಥೆಯು ಕಲಬುರಗಿಯ ಕೇಂದ್ರೀಯ ಬಸ್ ನಿಲ್ದಾಣ ಮತ್ತು ರಾಷ್ಟ್ರಪತಿ ವೃತ್ತದ ಕೌಂಟರ್‌ಗಳಲ್ಲಿ ಚಾಲ್ತಿಯಲ್ಲಿದೆ. ಶಹಾಪುರ, ಯಾದಗಿರಿ, ಬಳ್ಳಾರಿ, ಹೊಸಪೇಟೆ, ರಾಯಚೂರು, ಬೀದರ್, ವಿಜಯಪುರ, ಸಿಂಧನೂರು, ಲಿಂಗಸುಗೂರು, ಹುಮನಾಬಾದ್, ಕೊಪ್ಪಳ, ಗಂಗಾವತಿ ಮತ್ತು ಹಗರಿಬೊಮ್ಮನಹಳ್ಳಿ ನಗರ/ಪಟ್ಟಣಗಳ ಕೇಂದ್ರೀಯ ಬಸ್ ನಿಲ್ದಾಣಗಳಲ್ಲಿ ಹಾಗೂ ಹೈದ್ರಾಬಾದ್, ಮಂತ್ರಾಲಯದಲ್ಲಿ ಗಣಕೀಕೃತ ಮುಂಗಡ ಟಿಕೆಟ್ ಕಾಯ್ದಿರಿಸಲಾಗುತ್ತಿದೆ ಹಾಗೂ ಎಲ್ಲಾ ಪ್ರಮುಖ ಘಟಕ ಕೇಂದ್ರ ಸ್ಥಳಗಳಲ್ಲೂ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದಲ್ಲದೇ, ಇಂಟರ್‌ನೆಟ್ ಸೌಲಭ್ಯದಿಂದ ಟಿಕೆಟ್‌ಗಳನ್ನು **ಈ–ಟಿಕೆಟಿಂಗ್ ಮತ್ತು ಎಂ–ಟಿಕೆಟಿಂಗ್ (ಮೊಬೈಲ್ ಫೋನ್ ಮೂಲಕ)** ಸೇವೆಗಳ ಮೂಲಕ ಪ್ರಯಾಣಿಕರು ಮುಂಗಡವಾಗಿ ಕಾಯ್ದಿರಿಸಬಹುದಾಗಿದೆ. ವರ್ಷಾಂತ್ಯಕ್ಕೆ ಸಂಸ್ಥೆಯ 16 ಹಾಗೂ ಖಾಸಗಿಯವರ 63 ಮುಂಗಡ ಟಿಕೆಟ್ ವಿತರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಮುಂಗಡ ಟಿಕೇಟ್ ಕಾಯ್ದಿರಿಸುವುದಕ್ಕಾಗಿ ಪ್ರಯಾಣ ದರ ರೂ. 200ಕ್ಕಿಂತ ಕಡಿಮೆ ಇದ್ದಲ್ಲಿ, ರೂ.5.00 ಹಾಗೂ ರೂ. 200ಕ್ಕಿಂತ ಹೆಚ್ಚು ಇದ್ದಲ್ಲಿ, ರೂ. 10 ಅನ್ನು ಸಂಸ್ಕರಣಾ ಶುಲ್ಕವನ್ನಾಗಿ ವಿಧಿಸಲಾಗುತ್ತಿದೆ.

(ಊ) ಸಾಂದರ್ಭಿಕ ಸಾರಿಗೆ ಒಪ್ಪಂದದ ಸೌಲಭ್ಯ :

ದೈನಿಕ ಪ್ರಯಾಣಿಕರ ಸೇವೆಯ ಜೊತೆಗೆ, ಸಂಸ್ಥೆಯು ಸಾರ್ವಜನಿಕರ ಅನುಕೂಲಕ್ಕಾಗಿ ನಿಗದಿತ ದರಗಳಲ್ಲಿ ಸಾಂದರ್ಭಿಕ ಸಾರಿಗೆ ಒಪ್ಪಂದದ ಮೇರೆಗೆ ವಾಹನಗಳನ್ನು ಕಿ.ಮೀ. ಅಥವಾ ಅವಧಿಯ ಆಧಾರದ ಮೇಲೆ ಒದಗಿಸುತ್ತಿದೆ. ದಿನಾಂಕ 31–03–2020ರಂದು ಜಾರಿಯಲ್ಲಿದ್ದ ಸಾಂದರ್ಭಿಕ ಒಪ್ಪಂದದ ದರಗಳ ಪಟ್ಟಿಯನ್ನು **ಅನುಸೂಚಿ–'ಈ'**ನಲ್ಲಿ ಕೊಡಲಾಗಿದೆ.

(ಋ) ರಿಯಾಯಿತಿ/ನಿಯತಕಾಲಿಕ ಮತ್ತು ಉಚಿತ ಪಾಸ್‌ಗಳು :

ಸಂಸ್ಥೆಯು ವಿವಿಧ ವರ್ಗದ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವ ಪಾಸುಗಳಲ್ಲಿ ನೀಡಿರುವ ರಿಯಾಯತಿ ಕುರಿತ ಮಾಹಿತಿಯನ್ನು ಈ ಮುಂದೆ ನೀಡಲಾಗಿದೆ.

(i) ವಿದ್ಯಾರ್ಥಿಗಳು :

1	7ನೇ ತರಗತಿವರೆಗಿನ ಶಾಲಾ ವಿದ್ಯಾರ್ಥಿಗಳಿಗೆ	10 ತಿಂಗಳ ಅವಧಿಗೆ ಉಚಿತ (ಗರಿಷ್ಠ 60 ಕಿ.ಮೀ.ಗಳು)
2	8, 9, 10ನೇ ತರಗತಿಯ ಹೈಸ್ಕೂಲ್ ವಿದ್ಯಾರ್ಥಿಗಳಿಗೆ (ಬಾಲಕರು)	10 ತಿಂಗಳಿಗೆ ರೂ.600 (ಗರಿಷ್ಠ 60 ಕಿ.ಮೀ.ಗಳು)
3	8, 9, 10ನೇ ತರಗತಿಯ ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ	10 ತಿಂಗಳಿಗೆ ರೂ.400 (ಗರಿಷ್ಠ 60 ಕಿ.ಮೀ.ಗಳು)
4	ಕಾಲೇಜ್ & ಡಿಪ್ಲೊಮಾ ವಿದ್ಯಾರ್ಥಿಗಳಿಗೆ	10 ತಿಂಗಳಿಗೆ ರೂ.900 (ಗರಿಷ್ಠ 60 ಕಿ.ಮೀ.ಗಳು)
5	ಐ.ಟಿ.ಐ. ವಿದ್ಯಾರ್ಥಿಗಳಿಗೆ	12 ತಿಂಗಳಿಗೆ ರೂ.1150 (ಗರಿಷ್ಠ 60 ಕಿ.ಮೀ.ಗಳು)
6	ವೈದ್ಯಕೀಯ, ತಾಂತ್ರಿಕ ಹಾಗೂ ಇನ್ನಿತರ ವಿದ್ಯಾರ್ಥಿಗಳಿಗೆ	10 ತಿಂಗಳಿಗೆ ರೂ.1400 (ಗರಿಷ್ಠ 60 ಕಿ.ಮೀ.ಗಳು)

7	ಸಂಜೆ ಕಾಲೇಜ್ / ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ	10 ತಿಂಗಳಿಗೆ ರೂ.1200 (ಗರಿಷ್ಠ 60 ಕಿ.ಮೀ.ಗಳು)
8	ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ	ಉಚಿತ ಬಸ್‌ಪಾಸ್

(ಸೇವಾ ಶುಲ್ಕ ಪ್ರತಿ ಪಾಸ್‌ಗೆ ಪ್ರತಿ ಬಾರಿ ರೂ. 100 ಹಾಗೂ ಅಪಘಾತ ಪರಿಹಾರ ನಿಧಿಗಾಗಿ ಪ್ರತಿ ವಿದ್ಯಾರ್ಥಿಯಿಂದ ರೂ.5ನ್ನು ಪಡೆಯಲಾಗುತ್ತಿದೆ.)

(ii) ವಿದ್ಯಾರ್ಥಿಯೇತರರು :

1	ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯವರಿಂದ ಪುರಸ್ಕೃತವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಾಟಕ, ಯಕ್ಷಗಾನ ತಂಡದವರಿಗೆ ಪ್ರಯಾಣ ದರದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ.
2	ಸಮವಸ್ತ್ರ ಧರಿಸಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ನಗರಸಾರಿಗೆ ಬಸ್‌ಗಳಲ್ಲಿ ಪ್ರಯಾಣ ಮಾಡಲು ಉಚಿತ ಪಾಸ್‌ಗಳನ್ನು ನೀಡಲಾಗಿದೆ.
3	ನಗರಸಾರಿಗೆ, ನಗರ ಹೊರವಲಯ ಹಾಗೂ ಗ್ರಾಮಾಂತರ ವಾಹನಗಳಲ್ಲಿ ರಾಜ್ಯಾದ್ಯಂತ ಪ್ರಯಾಣ ಮಾಡಲು ಅಂಧರಿಗೆ ಉಚಿತ ಪಾಸ್‌ಗಳನ್ನು ನೀಡಲಾಗಿದೆ.
4	ಅಂಗವಿಕಲರಿಗೆ ತಮ್ಮ ವಾಸಸ್ಥಳದಿಂದ 100 ಕಿ.ಮೀ.ಗಳವರೆಗೆ ಪ್ರಯಾಣ ಮಾಡಲು ರಿಯಾಯಿತಿ ಪಾಸ್‌ಗಳನ್ನು ನೀಡಲಾಗಿದೆ.
5	ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. 75 ವರ್ಷ ಮೀರಿದ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಹಾಯಕನನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಕರೆದೊಯ್ಯಲು ಅವಕಾಶ ಕಲ್ಪಿಸಲಾಗಿದೆ.
6	ಗೋವಾ ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. 75 ವರ್ಷ ಮೀರಿದ ಗೋವಾ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಹಾಯಕನನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಕರೆದೊಯ್ಯಲು ಅವಕಾಶ ಕಲ್ಪಿಸಲಾಗಿದೆ.
7	ಹಿರಿಯ ನಾಗರೀಕರಿಗೆ ಅಂತರ್‌ರಾಜ್ಯ ಮಾರ್ಗವೂ ಸೇರಿದಂತೆ ಸಾಮಾನ್ಯ/ ವೇಗದೂತ/ ರಾಜಹಂಸ ವಾಹನಗಳಲ್ಲಿ ಪ್ರಯಾಣಿಸಲು ಶೇ.25ರಷ್ಟು ರಿಯಾಯತಿಯನ್ನು ನೀಡಲಾಗಿದೆ.
8	ಸಾರ್ವಜನಿಕರಿಗೆ ನಗರಸಾರಿಗೆಯಲ್ಲಿ ಪ್ರಯಾಣ ಮಾಡಲು ತಿಂಗಳಿಗೆ ರೂ. 820 ಮೌಲ್ಯದ ಮಾಸಿಕ ಪಾಸ್‌ಗಳನ್ನು ವಿತರಿಸಲಾಗಿದೆ.
9	ಶಾಲೆ/ಕಾಲೇಜ್/ಕೈಗಾರಿಕೆಗಳು ಒಪ್ಪಂದದ ಆಧಾರದ ಮೇಲೆ ಸಾರಿಗೆ ಬಸ್‌ಗಳನ್ನು ತೆಗೆದುಕೊಂಡಲ್ಲಿ, ಶಾಲೆಗಳಿಗೆ ಒಂದು ಕಿ.ಮೀ.ಗೆ ರೂ.35ರಂತೆ ರಿಯಾಯಿತಿ ದರದಲ್ಲಿ, ಕಾಲೇಜ್‌ಗಳಿಗೆ ಒಂದು ಕಿ.ಮೀ.ಗೆ ರೂ.36ರಂತೆ ರಿಯಾಯಿತಿ ದರದಲ್ಲಿ ನೀಡಲಾಗಿದೆ. ಕೈಗಾರಿಕೆಗಳಿಗೆ ಪ್ರತಿ ಕಿ.ಮೀ.ಗೆ ಸಾಮಾನ್ಯ ವಾಹನಕ್ಕೆ ರೂ. 37 ಹಾಗೂ ಸುಖಾಸೀನ ವಾಹನಕ್ಕೆ ರೂ. 43 ದರವನ್ನು ನಿಗದಿ ಪಡಿಸಲಾಗಿದೆ.
10	ಸ್ವಾತಂತ್ರ್ಯ ಯೋಧರ ವಿಧವೆಯರಿಗೆ, ವರ್ಷಕ್ಕೆ ರೂ.2000 ಮೊತ್ತದ ಪ್ರವಾಸ ಕೂಪನ್‌ಗಳನ್ನು ನೀಡಲಾಗಿದೆ.
11	ಭಾರತ ಸರ್ಕಾರದಿಂದ "ಶೌರ್ಯ ಪ್ರಶಸ್ತಿ" ಪಡೆದ ಮಕ್ಕಳಿಗೆ 18 ವರ್ಷ ತುಂಬುವವರೆಗೆ ಸಂಸ್ಥೆಯ ನಗರಸಾರಿಗೆ, ಸಾಮಾನ್ಯ, ವೇಗದೂತ ಮತ್ತು ರಾಜಹಂಸ ಬಸ್‌ಗಳಲ್ಲಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಸೌಲಭ್ಯ ಕಲ್ಪಿಸಲಾಗಿದೆ.
12	ರಾಜ್ಯ ಮಟ್ಟದಲ್ಲಿ ನೋಂದಾಯಿಸಿಕೊಂಡ ಪತ್ರಕರ್ತರಿಗೆ ರಾಜ್ಯಾದ್ಯಂತ ವೃತ್ತಿನಿಮಿತ್ತ ಚಟುವಟಿಕೆಗಳಿಗೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.
13	ರಾಷ್ಟ್ರಕ್ಕಾಗಿ ಜೀವತೆತ್ತ ಸೈನಿಕರ ಅವಲಂಬಿತರಿಗೆ ಉಚಿತ ಪಾಸುಗಳನ್ನು ವಿತರಿಸಲಾಗಿದೆ. ಈ ಸೌಲಭ್ಯವನ್ನು ಮೃತರ ಅವಲಂಬಿತರಿಗೆ (ತಂದೆ, ತಾಯಿ, ಪತ್ನಿ ಮತ್ತು 10 ವರ್ಷದವರೆಗಿನ ಅವಲಂಬಿತ ಮಕ್ಕಳಿಗೆ) ಸಾಮಾನ್ಯ ಮತ್ತು ವೇಗದೂತ ಸಾರಿಗೆ ಸೇವೆಗಳಲ್ಲಿ ರಾಜ್ಯದೊಳಗೆ ಪ್ರಯಾಣಿಸಲು ಅನುಮತಿಸಲಾಗಿದೆ (ಜುಲೈ 2012ರಿಂದ ಜುಲೈ 2022ರವರೆಗೆ).

14	ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಶೇ.16.20 ಪ್ರಮಾಣದಷ್ಟು ಮತ್ತು ಶೇ.6.55 ಪ್ರಮಾಣದಷ್ಟು ವಾಣಿಜ್ಯ ಮಳಿಗೆಗಳನ್ನು ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ.
15	ಕರ್ನಾಟಕ ರಾಜ್ಯದಲ್ಲಿನ ಅವತಾರ್ ಮುಂಗಡ ಟಿಕೆಟ್ ಬುಕ್ಕಿಂಗ್ ಖಾಸಗಿ ಏಜೆಂಟರುಗಳ ನೇಮಕಾತಿಯಲ್ಲಿ ಶೇ.10ರಷ್ಟು ಪ್ರಮಾಣದ ಮೀಸಲಾತಿಯನ್ನು ಅಂಗವಿಕಲರಿಗೆ ಕಲ್ಪಿಸಲಾಗಿದೆ.
16	ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ವಾಣಿಜ್ಯ ಮಳಿಗೆಗಳ ಪೈಕಿ ಶೇ.10ರಷ್ಟು ವಾಣಿಜ್ಯ ಮಳಿಗೆಗಳನ್ನು ಅಂಗವಿಕಲರಿಗೆ ಮೀಸಲಿಡಲಾಗಿದೆ.
17	ಪೂರ್ಣ ಅಂಧರಿಗೆ (ಶೇ.100) ಬಸ್ ನಿಲ್ದಾಣಗಳಲ್ಲಿರುವ ಟೆಲಿಫೋನ್ ಬೂತ್‌ಗಳ ನೀಡಿಕೆಯಲ್ಲಿ ಶೇ.100 ಪ್ರಮಾಣದಷ್ಟು ಮೀಸಲಾತಿ ಕಲ್ಪಿಸಲಾಗಿದೆ.
18	4 ಮತ್ತು ಹೆಚ್ಚು ಸಂಖ್ಯೆಯ ಪ್ರಯಾಣಿಕರು ಒಂದೇ ಗುಂಪು ಮುಂಗಡ ಟಿಕೆಟ್ ಕಾಯ್ದಿರಿಸಿದರೆ, ಶೇ. 5ರಷ್ಟು ರಿಯಾಯತಿ ನೀಡಲಾಗಿದೆ.
19	ಹೋಗುವ ಮತ್ತು ಹಿಂದಿರುಗುವ ಪ್ರಯಾಣದ ಟಿಕೆಟ್‌ಗಳನ್ನು ಏಕಕಾಲದಲ್ಲಿ ಖರೀದಿಸುವ ಪ್ರಯಾಣಿಕರಿಗೆ ಹಿಂದಿರುಗುವ ಪ್ರಯಾಣದ ಪ್ರಯಾಣದರದ ಶೇ.10ರಷ್ಟು ರಿಯಾಯತಿ ನೀಡಲಾಗಿದೆ.
20	ಸಂಸ್ಥೆಯ ಒಟ್ಟು 53 ಬಸ್ ನಿಲ್ದಾಣಗಳಲ್ಲಿ ಗಣಕೀಕೃತ ಮಾಹಿತಿ ಬಿತ್ತರಿಕೆ ವ್ಯವಸ್ಥೆ (ಪಿ.ಐ.ಎಸ್.) ಜಾರಿಗೆ ತರಲಾಗಿದೆ.
21	ಕಲಬುರಗಿ, ಯಾದಗಿರಿ, ಬೀದರ್, ವಿಜಯಪುರ, ಕೊಪ್ಪಳ, ರಾಯಚೂರು, ಹೊಸಪೇಟೆ ಮತ್ತು ಬಳ್ಳಾರಿ ನಗರ/ಪಟ್ಟಣಗಳಲ್ಲಿ ನಗರ ಸಾರಿಗೆ ದೈನಿಕ ಪಾಸ್‌ಗಳನ್ನು ರೂ. 40ರ ದರದಲ್ಲಿ ವಿತರಿಸಲಾಗುತ್ತಿದೆ.

(iii) ಸಂಸ್ಥೆಯ ನೌಕರರಿಗೆ ರಿಯಾಯಿತಿ :

1. ಸಂಸ್ಥೆಯಲ್ಲಿ ಕೆಲಸ ಮಾಡುವ ಎಲ್ಲಾ ದರ್ಜೆ–3 ಮತ್ತು ದರ್ಜೆ–4ರ ನೌಕರರಿಗೆ ಔದ್ಯಮಿಕ ಒಪ್ಪಂದದ ಪ್ರಕಾರ ನಗರ ಸಾರಿಗೆ ವಾಹನಗಳಲ್ಲಿ ಕೆಲಸಕ್ಕೆ ಹಾಜರಾಗಲು ಮತ್ತು ಮನೆಗೆ ಹಿಂದಿರುಗಲು ಉಚಿತ ಪಾಸ್‌ಗಳನ್ನು ನೀಡಲಾಗಿದೆ.
2. ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರರಿಗೆ ಮತ್ತು ಕುಟುಂಬದವರಿಗೆ ವರ್ಷದಲ್ಲಿನ ಒಂದು ತಿಂಗಳ ಅವಧಿಗೆ ಸಂಸ್ಥೆಯ ಬಸ್‌ಗಳಲ್ಲಿ ದೂರದ ಮಿತಿ ವಿಧಿಸದ ಉಚಿತ ಪಾಸ್‌ಗಳನ್ನು ನೀಡಲಾಗಿದೆ.
3. ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರರ ಮಕ್ಕಳಿಗೆ ಶಾಲೆ ಮತ್ತು ಕಾಲೇಜುಗಳಿಗೆ ಹೋಗಿ ಬರಲು ನಗರ ಸಾರಿಗೆ ಹಾಗೂ ಗ್ರಾಮಾಂತರ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸಲು ಉಚಿತ ಪಾಸ್‌ಗಳನ್ನು ನೀಡಲಾಗಿದೆ.

(ಎ) ಸಾರ್ವಜನಿಕ ದೂರುಗಳು :

ವರದಿ ವರ್ಷದಲ್ಲಿ ಸಾರ್ವಜನಿಕ ದೂರುಗಳ ಪ್ರಮಾಣ ಪ್ರತಿ ಲಕ್ಷ ಪ್ರಯಾಣಿಕರಿಗೆ 0.08ರಷ್ಟಿದ್ದು, ಸಾರ್ವಜನಿಕರಿಂದ ಬಂದ ಎಲ್ಲಾ 377 ದೂರುಗಳನ್ನು ಪರಿಶೀಲಿಸಿ, ಅಗತ್ಯವಿದ್ದ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ 321 ದೂರುಗಳನ್ನು ಇತ್ಯರ್ಥಗೊಳಿಸಲಾಗಿದೆ. ವರ್ಷಾಂತ್ಯಕ್ಕೆ 56 ದೂರುಗಳು ಬಾಕಿ ಉಳಿದಿದ್ದವು. ಸೇವಾ ಸೌಲಭ್ಯಗಳ ಸುಧಾರಣೆಗಾಗಿ ಸಾರ್ವಜನಿಕರಿಂದ ಬಂದ ಸಲಹೆಗಳನ್ನು ಪರಿಶೀಲಿಸಿ ಸೂಕ್ತವೆಂದು ಕಂಡುಬಂದವುಗಳನ್ನು ಅನುಷ್ಠಾನಗೊಳಿಸಲಾಗಿದೆ.

(ಏ) ಜಾತ್ರಾ ಮತ್ತು ಇತರ ವಿಶೇಷ ಸಂದರ್ಭಗಳಿಗಾಗಿ ಹೆಚ್ಚಿನ ಸಾರಿಗೆ ಸೇವೆಗಳು :

ಸಂಸ್ಥೆಯು ಜಾತ್ರೆ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳ ಸಂದರ್ಭದಲ್ಲಿ ಜನತೆಯ ಅನುಕೂಲಕ್ಕಾಗಿ ಈ ವರ್ಷದಲ್ಲಿಯೂ ವಿಶೇಷ ಸಾರಿಗೆ ಸೌಲಭ್ಯವನ್ನು ಒದಗಿಸಿದೆ.

(ಐ) ಸಾರಿಗೆ ಸೇವೆಯ ಗುಣಮಟ್ಟ :

ವರದಿ ವರ್ಷದಲ್ಲಿ ಒದಗಿಸಲಾದ ಸಾರಿಗೆ ವ್ಯವಸ್ಥೆ ಗುಣಮಟ್ಟದ ವಿವರವನ್ನು **ತಃಖ್ತೆ–15**ರಲ್ಲಿ ನೀಡಲಾಗಿದೆ. ವಿಭಾಗವಾರು ವಿವರವನ್ನು **ಅನುಬಂಧ–5**ರಲ್ಲಿ ನೀಡಲಾಗಿದೆ.

ತಃಖ್ತೆ–15

ಕ್ರ. ಸಂ.	ವಿವರ	2018–19	2019–20
1	ಸಮಯಪಾಲನೆ (ಶೇ.) (ಗ್ರಾಮಾಂತರ ಸೇವೆಗಳು) ಅ) ನಿರ್ಗಮನ ಆ) ಆಗಮನ	 92.7 94.2	 91.0 94.0
2	ಅವಘಡ ಪ್ರಮಾಣ (ಪ್ರತಿ 10,000 ಕಿ.ಮೀ.ಗಳಿಗೆ)	0.04	0.06
3	ಅಪಘಾತ ಪ್ರಮಾಣ (ಪ್ರತಿ ಲಕ್ಷ ಕಿ.ಮೀ.ಗಳಿಗೆ)	0.06	0.06

ವರದಿ ವರ್ಷದಲ್ಲಿ ವಾಹನಗಳ ಅವಘಡ ಪ್ರಮಾಣವು (ಪ್ರತಿ 10,000 ಕಿ.ಮೀ.ಗಳಿಗೆ) ಕಳೆದ ವರ್ಷದ 0.04ರಿಂದ 0.06ಕ್ಕೆ ಏರಿಕೆಯಾಗಿದೆ. ಅಪಘಾತ ಪ್ರಮಾಣವು (ಪ್ರತಿ ಲಕ್ಷ ಕಿ.ಮೀ.ಗಳಿಗೆ) ಕಳೆದ ವರ್ಷದಷ್ಟೆ ಸ್ಥಿರವಾಗಿದೆ.

ಅಪಘಾತಗಳ ವರ್ಗೀಕರಣವನ್ನು ಅವುಗಳ ಸ್ವರೂಪದನುಗುಣವಾಗಿ **ತಃಖ್ತೆ–16**ರಲ್ಲಿ ಕೊಡಲಾಗಿದೆ.

ತಃಖ್ತೆ–16

ಕ್ರ. ಸಂ.	ಅಪಘಾತ ಸ್ವರೂಪ	2018–19	2019–20
1	ಮರಣಾಂತಿಕ : ಸಂಖ್ಯೆ ಪ್ರಮಾಣ	83 0.02	86 0.02
2	ಗಂಭೀರ : ಸಂಖ್ಯೆ ಪ್ರಮಾಣ	58 0.01	62 0.01
3	ಲಘು/ನಗಣ್ಯ : ಸಂಖ್ಯೆ ಪ್ರಮಾಣ	182 0.04	173 0.03
	ಒಟ್ಟು : ಸಂಖ್ಯೆ ಪ್ರಮಾಣ	**323 0.06**	**321 0.06**
4	ಮರಣ ಹೊಂದಿದವರ ಸಂಖ್ಯೆ	107	109
5	ಗಾಯಗೊಂಡವರ ಸಂಖ್ಯೆ	564	706

ವರದಿ ವರ್ಷದಲ್ಲಿ ಒಟ್ಟು 321 ಅಪಘಾತಗಳು ವರದಿಯಾಗಿವೆ. ಅವುಗಳಲ್ಲಿ 86 ಅಪಘಾತಗಳು ಮರಣಾಂತಿಕ, 62 ಗಂಭೀರ ಸ್ವರೂಪದ ಮತ್ತು 173 ಲಘು ಸ್ವರೂಪದ ಅಪಘಾತಗಳಾಗಿರುತ್ತವೆ. ಸೇವಾ ಗುಣಮಟ್ಟದ ಇನ್ನಿತರ ನಿಯತಾಂಕಗಳ ವಿವರವನ್ನು **ಅನುಬಂಧ–5**ರಲ್ಲಿ ಕೊಡಲಾಗಿದೆ.

(ಒ) ಮಾರ್ಗ ತಪಾಸಣೆ:

ವರದಿ ವರ್ಷದಲ್ಲಿ ಸಾರಿಗೆ ಆದಾಯದ ಸೋರಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಕೇಂದ್ರಿಯ ತನಿಖಾ ದಳ ಮತ್ತು ವಿಭಾಗೀಯ ತನಿಖಾ ದಳಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟಾರೆಯಾಗಿ 176996 ಬಸ್‌ಗಳನ್ನು ತನಿಖೆ ಮಾಡಿ, 10956 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ವಿವರವನ್ನು ತಃಖ್ತೆ–16 'ಎ'ದಲ್ಲಿ ನೀಡಲಾಗಿದೆ.

ತಃಖ್ತೆ–16ಎ

ಕ್ರ ಸಂ.	ವಿವರ	2018–19	2019–20
1	ಕರ್ತವ್ಯ ಮೇಲಿದ್ದ ತನಿಖಾ ಸಿಬ್ಬಂದಿ	658	653
2	ಪರಿಣಾಮಕಾರಿ ಮಾನವ ತನಿಖಾ ದಿನಗಳು	15040	14927
3	ತಪಾಸಣೆ ಮಾಡಲಾದ ಬಸ್‌ಗಳ ಸಂಖ್ಯೆ	181228	176996
4	ಪತ್ತೆ ಹಚ್ಚಲಾದ ಗಂಭೀರ ಕೆಂಪು ಗುರುತಿನ ಪ್ರಕರಣಗಳ ಸಂಖ್ಯೆ	586	498
5	ಪತ್ತೆ ಹಚ್ಚಲಾದ ಕೆಂಪು ಗುರುತಿನ ಪ್ರಕರಣಗಳ ಸಂಖ್ಯೆ	869	935
6	ಪತ್ತೆ ಹಚ್ಚಲಾದ ಸಾಮಾನ್ಯ ಪ್ರಕರಣಗಳ ಸಂಖ್ಯೆ	9750	9523
7	ಪತ್ತೆ ಹಚ್ಚಲಾದ ಒಟ್ಟು ಪ್ರಕರಣಗಳ ಸಂಖ್ಯೆ	11206	10956
8	ಸೋರಿಕೆ ಹಣದ ಮೊತ್ತ (ರೂ.ಗಳಲ್ಲಿ)	314815	306455
9	ಸಂಗ್ರಹಿಸಲಾದ ದಂಡ (ರೂ.ಗಳಲ್ಲಿ)	2073001	2122971
10	ದಂಡತೆತ್ತ ಟಿಕೆಟ್‌ರಹಿತ ಪ್ರಯಾಣಿಕರ ಸಂಖ್ಯೆ	13894	13587
11	ಶೇ.ತನಿಖಾ ಪ್ರಮಾಣ	2.3	1.6

*****

ಪರಿಚ್ಛೇದ 5

ಆಟೋ ಇಂಜಿನೀಯರಿಂಗ್

5.1 ವಾಹನ ಬಲ :

ಸಂಸ್ಥೆಯು ಕಳೆದ ವರ್ಷದ (2018–19) ಅಂತ್ಯಕ್ಕೆ 4878 ವಾಹನಗಳನ್ನು ಹೊಂದಿತ್ತು. ವರದಿ ವರ್ಷದಲ್ಲಿ 49 ಹೊಸ ವಾಹನಗಳನ್ನು ವಾಹನ ಸಮೂಹಕ್ಕೆ ಸೇರ್ಪಡೆ ಮಾಡಲಾಗಿದ್ದು, (50 ವಾಹನಗಳು ಹರಪನಹಳ್ಳಿ ಘಟಕದ ವರ್ಗಾವಣೆಯಿಂದ ಸೇರ್ಪಡೆಯಾಗಿವೆ) 248 ಹಳೆ ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ವರದಿ ವರ್ಷದ ಅಂತ್ಯಕ್ಕೆ (31.3.2020) ಸಂಸ್ಥೆಯ ವಾಹನ ಬಲ ಒಟ್ಟು 4729 ಆಗಿತ್ತು. ಅವುಗಳ ಪೈಕಿ ಕಾರ್, ಜೀಪ್, ಟ್ರಕ್ ಇತ್ಯಾದಿ ವಾಹನಗಳು ಸೇರಿ ಒಟ್ಟು 149 ಇಲಾಖಾ ವಾಹನಗಳಿದ್ದವು. ವಿವರವನ್ನು **ತಃಖ್ತೆ–17**ರಲ್ಲಿ ನೀಡಲಾಗಿದೆ.

ತಃಖ್ತೆ–17

ಕ್ರ ಸಂ.	ವಿವರ	ವಾಹನಗಳ ಸಂಖ್ಯೆ ಮಾರ್ಚ್ 31ರಂದು ಇದ್ದಂತೆ	
		2018–19	2019–20
1	ನೋಂದಣಿಯಾದ ಪ್ರಯಾಣಿಕ ವಾಹನಗಳು: ಅ) ಲೈಲ್ಯಾಂಡ್	2761	2688
	ಆ) ಟಾಟಾ	1122	1042
	ಇ) ಐಶರ್	700	704
	ಈ) ಕರೋನಾ	26	26
	ಉ) ಸ್ವರಾಜ್ ಮಜ್ದ (ಮಿನಿ)	4	4
	ಊ) ಮಿಡಿ ಜೆಎನ್.ನರ್ಮ್	265	265
	ಒಟ್ಟು	**4878**	**4729**
2	ನೋಂದಣಿಯಾಗದ ವಾಹನಗಳು	0	0
3	ಬಸ್ ಛಾಸಿಸ್	0	0
4	ಇಲಾಖಾ ವಾಹನಗಳು : ಅ) ಕಾರ್, ವ್ಯಾನ್	27	29
	ಆ) ಜೀಪ್	44	46
	ಇ) ಟ್ರಕ್	52	49
	ಈ) ಇತರ ವಾಹನಗಳು (ವಾಟರ್ ಟ್ಯಾಂಕರ್, ಕ್ರೇನ್ ಇತ್ಯಾದಿ)	27	25
	ಒಟ್ಟು (4)	**150**	**149**

ತಯಾರಿಕಾವಾರು ಮತ್ತು ವಿಭಾಗವಾರು ವಾಹನಗಳ ವಿವರವನ್ನು **ಅನುಬಂಧ–6**ರಲ್ಲಿ ಕೊಡಲಾಗಿದೆ.

ವಾಹನಗಳ ತಯಾರಿಕಾವಾರು ವಯೋಮಾನ(ಕಿ.ಮೀ.ಗಳಲ್ಲಿ) ವಿಂಗಡಣೆಯ ವಿವರವನ್ನು **ತಃಖ್ತೆ–18**ರಲ್ಲಿ ಕೊಡಲಾಗಿದೆ.

ತಃಖ್ತೆ–18

ಕ್ರ. ಸಂ.	ವಯೋಮಾನ (ಲಕ್ಷ ಕಿ.ಮೀ.ಗಳಲ್ಲಿ)		ಲೈಲ್ಯಾಂಡ್		ಟಾಟಾ		ಐಸರ್		ಮಿಡಿ (ಟಾಟಾ)		ಕರೋನಾ		ಮಿನಿ (ಸ್ವಮಜ್ದ)		ಒಟ್ಟು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
1	0.00ರಿಂದ 1.00	ಸಂಖ್ಯೆ	5	0.2	52	5.0	1	0.1	7	2.6	0	0	0	0	65	1.4
		ಕಿ.ಮೀ.	7757		5809		52218		91560		0		0		15908	
2	1.01ರಿಂದ 2.00	ಸಂಖ್ಯೆ	69	2.6	1	0.1	2	0.3	66	24.9	0	0	3	75.0	141	3.0
		ಕಿ.ಮೀ.	181265		110980		196248		158168		0		166989		169864	
3	2.01ರಿಂದ 3.00	ಸಂಖ್ಯೆ	400	14.9	18	1.7	11	1.6	158	59.6	0	0	1	25.0	588	12.4
		ಕಿ.ಮೀ.	257167		266927		272620		237953		0		259658		252596	
4	3.01ರಿಂದ 4.00	ಸಂಖ್ಯೆ	516	19.2	52	5.7	296	42.0	34	12.8	2	7.7	0	0	900	19.0
		ಕಿ.ಮೀ.	344308		352931		364377		335501		349754		0		351086	
5	4.01ರಿಂದ 5.00	ಸಂಖ್ಯೆ	229	8.5	8	0.8	326	46.3	0	0	0	0	0	0	563	11.9
		ಕಿ.ಮೀ.	443205		431594		436494		0		0		0		439154	
6	5.01ರಿಂದ 6.00	ಸಂಖ್ಯೆ	128	4.8	3	0.3	63	8.9	0	0	5	19.2	0	0	199	4.2
		ಕಿ.ಮೀ.	538398		573887		519883		0		669588		0		536368	
7	6.00ರಿಂದ 7.00	ಸಂಖ್ಯೆ	86	3.2	20	1.9	3	0.4	0	0	6	23.1	0	0	115	2.4
		ಕಿ.ಮೀ.	65996		647877		613952		0		731120		0		657399	
8	7.01ರಿಂದ 7.50	ಸಂಖ್ಯೆ	94	3.5	35	3.4	2	0.3	0	0	0	0	0	0	131	2.8
		ಕಿ.ಮೀ.	727559		729880		727526		0		0		0		728179	
9	7.51ರಿಂದ 8.00	ಸಂಖ್ಯೆ	78	2.9	79	7.6	0	0	0	0	0	0	0	0	157	3.3
		ಕಿ.ಮೀ.	775717		779045		0		0		0		0		777392	
10	8.01ರಿಂದ 8.50	ಸಂಖ್ಯೆ	103	3.8	101	9.7	0	0	0	0	6	23.1	0	0	210	4.4
		ಕಿ.ಮೀ.	823818		825981		0		0		838036		0		825265	
11	8.51ರಿಂದ 9.00	ಸಂಖ್ಯೆ	105	3.9	129	12.4	0	0	0	0	0	0	0	0	234	4.9
		ಕಿ.ಮೀ.	875229		875542		0		0		0		0		875402	
12	9.01ರಿಂದ 10.00	ಸಂಖ್ಯೆ	183	6.8	254	24.4	0	0	0	0	1	3.8	0	0	438	9.3
		ಕಿ.ಮೀ.	948528		945803		0		0		995686		0		947055	
13	10.00 ಮೇಲ್ಪಟ್ಟು	ಸಂಖ್ಯೆ	692	25.7	290	27.8	0	0	0	0	6	23.1	0	0	988	20.9
		ಕಿ.ಮೀ.	1139574		1074757		0		0		1044903		0		1119974	
	ಒಟ್ಟು	ಸಂಖ್ಯೆ	2688	100	1042	100	704	100	265	100	26	100	4	100	4729	100
		ಕಿ.ಮೀ.	665072		841723		411429		226731		797211		190156		641998	

5.2 ಛಾಸಿಸ್ ಖರೀದಿ :

ವರದಿ ವರ್ಷದಲ್ಲಿ 49 ಛಾಸಿಸ್‌ಗಳನ್ನು ಸ್ವೀಕರಿಸಲಾಗಿದ್ದು, ಛಾಸಿಸ್ ಖರೀದಿಗಾಗಿ ನೀಡಲಾದ ಆದೇಶ, ಪೂರೈಕೆಗೊಂಡ ಮತ್ತು ಬಾಕಿ ಉಳಿದವುಗಳ ಸಂಖ್ಯೆಯ ತಯಾರಿಕೆವಾರು ವಿವರವನ್ನು **ತಃಖ್ತೆ–19**ರಲ್ಲಿ ನೀಡಲಾಗಿದೆ.

ತಃಖ್ತೆ–19

ತಯಾರಿಕೆ	31.03.2019ರಂದು ಇದ್ದ ಬಾಕಿ	2019–20ರಲ್ಲಿ ನೀಡಲಾದ ಆದೇಶ	2019–20ರಲ್ಲಿ ಆದ ಪೂರೈಕೆ	31–03–2020ರಂದು ಉಳಿದ ಬಾಕಿ
ಟಾಟಾ	0	50	49	1
ಮಿನಿ ಜೆಎನ್‌ನರ್ಮ್	0	0	0	0
ಲೈಲ್ಯಾಂಡ್	130	0	0	0
ಐಸರ್	0	0	0	0
ಕರೋನಾ	0	0	0	0
ಒಟ್ಟು	**130**	**50**	**49**	**1**

ಟಿಪ್ಪಣಿ : 2018–19ನೇ ಸಾಲಿನಲ್ಲಿ ಖರೀದಿಸಲು ಯೋಜಿಸಿದ್ದ 130 ವಾಹನಗಳನ್ನು ಖರೀದಿಸಿರುವುದಿಲ್ಲ.

1.3 (ಅ) ವಾಹನಗಳ, ಅಸೆಂಬ್ಲಿಗಳ ಮತ್ತು ಟಯರ್‌ಗಳ ಕಾರ್ಯನಿರ್ವಹಣೆ:

ವರದಿ ವರ್ಷದಲ್ಲಿ ವಾಹನ, ಅಸೆಂಬ್ಲಿ ಮತ್ತು ಟಯರ್ ಇವುಗಳಿಗೆ ಸಂಬಂಧಿಸಿದ ಕಾರ್ಯನಿರ್ವಹಣೆ ವಿವರವನ್ನು **ತಃಖ್ತೆ–20**ರಲ್ಲಿ ಕೊಡಲಾಗಿದೆ.

ತಃಖ್ತೆ–20

ಕ್ರ. ಸಂ.	ವಿವರ	2018–19	2019–20
1	ಮಾರ್ಚ್ 31ರಂದು ವಾಹನಗಳ ಸರಾಸರಿ ವಯೋಮಾನ(ಕಿ.ಮೀ.ಗಳಲ್ಲಿ)	560913	641998
2	ವಾಹನ ಸಮೂಹದಲ್ಲಿ 9 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿದ ವಾಹನಗಳ ಪ್ರಮಾಣ (ಶೇ.)	25.5	30.2
3	ಸರಾಸರಿ ವಾಹನ ಬಳಕೆ (ಒಟ್ಟು ಕಿ.ಮೀ. ಮೇಲೆ)	351.7	350.3
4	ವಾಹನ ಸಮೂಹ ಬಳಕೆ (ಶೇ.) : ಅ) ವಿಭಾಗೀಯ ವಾಹನ ಸಮೂಹದ ಮೇಲೆ ಆ) ಒಟ್ಟು ವಾಹನ ಸಮೂಹದ ಮೇಲೆ(ಪ್ರಾದೇಶಿಕ ಕಾರ್ಯಾಗಾರ ಸೇರಿ)	 86.3 84.8	 85.4 84.1
5	ದುರಸ್ತಿಗಾಗಿ ನಿಂತ ವಾಹನಗಳ ಪ್ರಮಾಣ (ಶೇ.): ಅ) ವಿಭಾಗಗಳಲ್ಲಿ ಆ) ಒಟ್ಟು ಸಂಸ್ಥೆಯಲ್ಲಿ(ಪ್ರಾದೇಶಿಕ ಕಾರ್ಯಾಗಾರ ಸೇರಿ)	 3.51 5.02	 3.04 4.35
6	ಅವಘಡ ಪ್ರಮಾಣ(ಪ್ರತಿ 10,000 ಕಿ.ಮೀ.ಗೆ): ಅ) ತಾಂತ್ರಿಕ ಕಾರಣಗಳಿಗಾಗಿ ಆ) ಇತರ ವೈಫಲ್ಯಗಳಿಗಾಗಿ ಇ) ಒಟ್ಟು	 0.04 0.00 0.04	 0.06 0.00 0.06

7	ಕೆ.ಎಂ.ಪಿ.ಎಲ್ (ಡೀಸಲ್)	5.25	5.24
8	ಕೆ.ಎಂ.ಪಿ.ಎಲ್ (ಯಂತ್ರದೆಣ್ಣೆ)(ಟಾಪ್–ಅಪ್)	15365	15877
9	ಸರಾಸರಿ ಟಯರ್ ಜೀವಮಾನ (ಕಿ.ಮೀ.ಗಳಲ್ಲಿ) : ಅ) ಹೊಸದು ಆ) ಮರುಒಪ್ಪಗೊಳಿಸಿದ ಇ) ಒಟ್ಟು ಜೀವಮಾನ	 88489 37254 154998	 91291 43314 161305
10	ಸರಾಸರಿ ಬ್ಯಾಟರಿ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ)	2.90	3.07
11	ಸರಾಸರಿ ಇಂಜಿನ್ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ): ಅ) ಹೊಸದು ಆ) ಮರುಒಪ್ಪಗೊಳಿಸಿದ	 8.16 3.77	 9.10 4.06
12	ಸರಾಸರಿ ಎಫ್.ಐ.ಪಿ. ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ): ಅ) ಹೊಸದು ಆ) ಮರುಒಪ್ಪಗೊಳಿಸಿದ	 5.52 2.43	 5.29 2.73

ವಿಭಾಗವಾರು ಇಂಧನ ಮತ್ತು ಟಯರ್ ಕಾರ್ಯನಿರ್ವಹಣೆ ವಿವರವನ್ನು **ಅನುಬಂಧ–7**ರಲ್ಲಿ ಕೊಡಲಾಗಿದೆ.

(ಆ) ಅವಘಡಗಳು :

ವರದಿ ವರ್ಷದಲ್ಲಿ ಅವಘಡ ಪ್ರಮಾಣವು (ಪ್ರತಿ 10,000 ಕಿ.ಮೀ.ಗಳಿಗೆ) 0.06ರಷ್ಟಿತ್ತು. ಕಾರಣವಾರು ವೈಫಲ್ಯತೆ ವಿವರವನ್ನು **ತಃಖ್ತೆ–21**ರಲ್ಲಿ ಕೊಡಲಾಗಿದೆ.

ತಃಖ್ತೆ–21

ಕ್ರ. ಸಂ.	ವೈಫಲ್ಯತೆ	ಅವಘಡಗಳ ಸಂಖ್ಯೆ		ಒಟ್ಟು ಅವಘಡಗಳಿಗೆ ಶೇ. ಪ್ರಮಾಣ		ಅವಘಡ ಪ್ರಮಾಣ (10000 ಕಿ.ಮೀ.ಗಳಿಗೆ)	
		2018–19	2019–20	2018–19	2019–20	2018–19	2019–20
1	ವಿದ್ಯುತ್	327	457	14.2	16.7	0.01	0.01
2	ಇಂಜಿನ್	229	227	9.9	8.3	0.00	0.00
3	ಟ್ರಾನ್ಸ್‌ಮಿಷನ್	573	642	24.9	23.4	0.01	0.01
4	ಫ್ರಂಟ್ ಆ್ಯಕ್ಸ್ಲ್ ಮತ್ತು ಸ್ಟೇರಿಂಗ್	56	59	2.4	2.2	0.00	0.00
5	ರಿಯರ್ ಆ್ಯಕ್ಸ್ಲ್	120	152	5.2	5.5	0.00	0.00
6	ರೋಡ್ ವ್ಹೀಲ್ಸ್	168	315	7.3	11.5	0.00	0.01
7	ಬ್ರೇಕ್	256	250	11.1	9.1	0.00	0.00
8	ಸ್ಪ್ರಿಂಗ್	343	348	14.9	12.7	0.01	0.01
9	ಇಂಧನ	95	110	4.1	4.0	0.00	0.00
10	ಇತರ	137	179	5.9	6.5	0.00	0.00
	ಒಟ್ಟು	**2304**	**2739**	**100**	**100**	**0.04**	**0.06**

1.4 ಪ್ರಾದೇಶಿಕ ಕಾರ್ಯಾಗಾರ ಮತ್ತು ವಿಭಾಗೀಯ ಕಾರ್ಯಾಗಾರಗಳ ಉತ್ಪಾದನೆ :

ವರದಿ ವರ್ಷದಲ್ಲಿ ಯಾದಗಿರಿ ಪ್ರಾದೇಶಿಕ ಕಾರ್ಯಾಗಾರದಲ್ಲಿನ ಮತ್ತು ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ವಿಜಯಪುರ ಮತ್ತು ಬಳ್ಳಾರಿ ವಿಭಾಗೀಯ ಕಾರ್ಯಾಗಾರಗಳಲ್ಲಿನ ಉತ್ಪಾದನೆ ಮತ್ತು ಪ್ರಾದೇಶಿಕ ಕಾರ್ಯಾಗಾರದಿಂದ ಪಡೆಯಲಾದ ವಿವಿಧ ಸಾಮಗ್ರಿಗಳ ವಿವರವನ್ನು **ತಃಖ್ತೆ–22**ರಲ್ಲಿ ಕೊಡಲಾಗಿದೆ.

ತಃಖ್ತೆ–22

ಕ್ರ. ಸಂ.	ಬಾಬ್ತು	ಉತ್ಪಾದನೆ (ಸಂಖ್ಯೆ)	
		2018–19	**2019–20**
1	ಹೊಸ ವಾಹನ ಕವಚಗಳು:		
	(ಅ) ವೇಗದೂತ/ಸಾಮಾನ್ಯ	0	0
	(ಆ) ಸುಖಾಸೀನ/ಹೈ–ಟೆಕ್	0	0
	(ಇ) ನಗರಸಾರಿಗೆ	0	0
	ಒಟ್ಟು	**0**	**0**
2	ವಾಹನಗಳ ದುರಸ್ತಿ:		
	(ಅ) ಮರುಒಪ್ಪಕ್ಕಾಗಿ	31	22
	(ಆ) ಭಾರಿ ದುರಸ್ತಿಗಾಗಿ	11	31
3	ಮರುಒಪ್ಪ/ದುರಸ್ತಿ ಮಾಡಿದ ಅಸೆಂಬ್ಲಿಗಳು:		
	(ಅ) ಇಂಜಿನ್	0	0
	(ಆ) ಎಫ್.ಐ.ಪಿ.	0	0
	(ಇ) ಫ್ರಂಟ್ ಆ್ಯಕ್ಸ್ಲ್	0	0
	(ಈ) ರಿಯರ್ ಆ್ಯಕ್ಸ್ಲ್	0	0
	(ಉ) ರಿಯರ್ ಆ್ಯಕ್ಸ್ಲ್ ಹೌಸಿಂಗ್	0	0
	(ಊ) ಆಟೋಮೈಸರ್	0	0

1.5 ಹೊಸ ವಾಹನ ಕವಚಗಳು :

ವರದಿ ವರ್ಷದಲ್ಲಿ ಒಟ್ಟು 49 ವಾಹನಗಳನ್ನು ಖಾಸಗಿಯವರ ಮುಖಾಂತರ ನಿರ್ಮಾಣ ಮಾಡಲಾಗಿದೆ. ವಿವರವನ್ನು **ತಃಖ್ತೆ–23**ರಲ್ಲಿ ಕೊಡಲಾಗಿದೆ.

ತಃಖ್ತೆ–23

ಕ್ರ. ಸಂ.	ವಾಹನ ಮಾದರಿ	ಪ್ರಾದೇಶಿಕ ಕಾರ್ಯಾಗಾರ		ಖಾಸಗಿ ಕಾರ್ಯಾಗಾರ		ಒಟ್ಟು	
		2018–19	2019–20	2018–19	2019–20	2018–19	2019–20
1	ಗ್ರಾಮಾಂತರ						
	ಅ) ಸುಖಾಸೀನ/ಹೈ–ಟೆಕ್/ ಹವಾನಿಯಂತ್ರಿತ	0	0	0	0	0	0
	ಬ) ವೇಗದೂತ	3	0	541	49	544	49
	ಕ) ಸಾಮಾನ್ಯ	0	0	0	0	0	0
2	ನಗರಸಾರಿಗೆ	0	0	0	0	0	0
3	ಕರೋನಾ	0	0	0	0	0	0
4	ಜೆಎನ್.ನರ್ಮ್ (ನಗರಸಾರಿಗೆ)	0	0	0	0	0	0
5	ಹವಾನಿಯಂತ್ರಣರಹಿತ ಸ್ಲೀಪರ್	0	0	0	0	0	0
6	ರಾಜಹಂಸ	0	0	0	0	0	0
ಒಟ್ಟು		**3**	**0**	**541**	**49**	**544**	**49**

1) ಅಸೆಂಬ್ಲಿಗಳ ಮರುಒಪ್ಪದ ಜೊತೆಗೆ ಬಹುತೇಕ ಬಿಡಿಭಾಗಗಳನ್ನು ಮತ್ತು ಲಘು ಅಸೆಂಬ್ಲಿಗಳನ್ನು ಉತ್ಪಾದಿಸಿ ವಿಭಾಗೀಯ/ಘಟಕ ಕಾರ್ಯಾಗಾರಗಳಿಗೆ ಅಗತ್ಯತೆಗನುಗುಣವಾಗಿ ಕಾಲಕಾಲಕ್ಕೆ ಪೂರೈಸಲಾಗಿದೆ.

2) ವಿಭಾಗಗಳ ಕಾರ್ ಮತ್ತು ಜೀಪ್ ದುರಸ್ತಿಯನ್ನು ಆಯಾಯ ವಿಭಾಗೀಯ ಕಾರ್ಯಾಗಾರದಲ್ಲಿನ ಇಲಾಖಾ ವಾಹನ ಶಾಖೆಯು ಕೈಗೊಂಡಿದೆ.

*****

ಪರಿಚ್ಛೇದ 6 ಉಗ್ರಾಣ

6.1 ದಾಸ್ತಾನು ತಪಶೀಲು ಪಟ್ಟಿ :

